# Report on the Activities and Achievements of the UBRANGALA SRI MAHADEVA PARVATHI TEMPLE

## RENOVATION COMMITTEE

Ubrangala Sri Mahadeva Parvathi Temple is a famous and ancient temple in Kasaragod Taluk. The presiding dieties of the temple are Lord Mahadeva and Goddess Parvathi. Besides these dieties, there are four other deities, viz Lord Shastara ( Ayyappan ), Lord Subrahmanya Lord Sri Ganapathi and Lord Parashurama. The legend says that Lord Parashurama did penance here and Gods gave him Darshan. At that place a temple was constructed. But about 300 years ago the said temple was destroyed by the enemies. Though temporary repairs were effected and Poojas and Festivals were being conducted, the temple buildings were subjected to further deterioration.

Early in 1970 'Astamangala Prashnam' was held by the famous Astrologer Sri Pudusseri Vishnu Namboodiri, and after knowing the past, present and future of of the place, according to the astrological predictions, a Renovation committee was formed under my presidentship.

After the formation of the Renovation committee, 'Anujna Kalasham' was performed on 8-2-1971 by Late Sri Delampady Subraya Thantri in the presence of His Holiness Sri Keshavananda Bharathi Swamiji of Edneer Mutt. On 3-3-1971 His Holiness Swamiji of Edneer Mutt laid the foundation stone for Shrikoil (Garbha Griham) of the temple. On 11-5-1971 His Holiness Jagadguru Shankaracharya of Sringeri Mutt Sri Sri Madabhinava Vidyathirtha Shankaracharya Swamiji visited the temple and blessed the venture. In December, 1980 His Holiness the Swamiji of Sri Ramachandrapura Mutt was pleased to visit the temple and appreciated the work done so far. In February 1981 His Holiness the Swamiji of Sri Pejawara Mutt and His Holiness the Swamiji of Sri Subrahmanya Mutt also visited the temple and blessed our venture.

In August 1972 during the Onam vacation, the President of the committee visited Bombay and formed an Unit of the Renovation Committee there, under the Presidentship of Smt. Dr. U. Lalitha Rao ( at present an M.L.A. of Maharashtra Legislative Assembly ) with Sri S. M. Tholpady as the secretary. The committee consisted of eminent men of South Kanara in Bomby. In February 1973, the committee at Bombay arranged a benefit show and collected a net profit of Rs. 6000/- for the temple. Our Renovation committee places on record its appreciation for the efforts made by the Bombay committee.

The President of the committee and the Trustee of the temple with Sri U. Mahalinga Bhat thereafter visited Coorg

and Bangalore and collected donations from various religious minded and philanthropic persons. In 1977 the President and Sri K. Mohan Rao went to Madras and approched very many leading personalities in Madras city, who were generous enough to liberally donate their mite to the noble cause. The President also visited Shimoga town in the company of Sri K. Mohan Rao and Sri B. D. K. Rao, chartered accountant in Shimoga ( who rendered great assistance to the collection drive ) and the Renovation committee received good response from the citizens of Shimoga and places on Record the help rendered by Sri K. Mohan Rao and Sri B. D. K. Rao.

In 1980, a comprehensive committee was formed with a view to celebrate 'Neveekarana Prathishta Brahma Kalasha'.

It is gratifying to note that the villagers, espcially the Yadava Sangha. ( Ayar Sangha ) and Yadava Seva Sangha, came forward to do 'Shramadan' work, viz. digging a tank and also levelling the premises of the temple. By the untiring efforts of the Ubrangala Yadava Sangha the digging of the tank was completed which has got perennial water supply. The difficulties experienced for want of water which was a problem, was solved by the noble service rendered by the Yadava Sangha

The generous people of Karnataka state, Kasaragod and Kanhangad Taluks, of Ernakulam and Calicut etc. have offered their valuable contributions, which help is also appreciated by the Renovation Committee.

In the beginning stages of Renovation, the residents of Uppangala under the leadership of Sri U. Vasudeva Bhat, Uppangala have done memorable service and thanks are due to them. Of late, the members of Theeya Samaj have levelled and improved the northern Anganam, and the Southern Anganam has been improved by the volunteers of local R S S Unit. Our sincere thanks are offered to them also.

We place on Record our gratitude for the help rendered by Sri D. Veerendra Heggade, Dharmadhikari of Sri Manjunatheshwara Temple, Dharmasthala, who was pleased to visit the temple and laid foundation for the Eastern Gopuram and donated liberally to the noble cause. Similarly the committee expresses its gratitude to T. V. S. charities for donating Rs. 10,000/-. We will be failing in our duty if we do not mention the great help rendered by Sri T. Gopala Bhandary, Sudarshan Tile works, Mangalore, who was kind enough to donate entire quantity of Tiles required for the temple structures, besides cash donations. We remember with gratitude, late Sri H. Srinivas Pai, Jeweller, Mangalore who was pleased to meet the entire cost of the 18 granite steps for the temple and the late Sri K. K. Irniraya who gave the timber required for the Upper roof of the Shreekoil.

We will be failing in our duty if we do not make mention of the help rendered by Sri T. R. Mahalingam, flutist who gave a benefit performance in 1975 in Town Hall, Mangalore.

We cannot afford to forget the great help rendered by Sri B. Sundara Rao, Managing Partner of Taj Mahal Group of

Hotels and Sri B. Seetharama Rao of Dwaraka Hctel, Hyderabad. They were not only generous in their donations but were very hosptiable also. Thanks to them and to other donors of Hyderabad.

A large number of people have come forward with liberal donations for the Pooja Scheme initiated by the committee. The Scheme envisages a Pooja being performed every year in the name of the donor who is pleased to donate Rs. 250/- or more.

To raise funds, a Lucky dip lottery was also held in 1972 for which people co-operated magnanimously.

some of the members of Kodoth Tharavaad, who have renovation of several temples to their credit, have been of great assistance to the committee. Their encouraging words and liberal donations have gone a long way in the execution of the Renovation work and celebration of '**Brahmakalasha**' ceremonies.

Thanks are due to Shilpies viz Sri Renjala Gopalakrishna Shenoy, Sri Shamaraya Acharya of Karkala, Sri Shankaranarayanan of chundanbutta and late Sri Nanu of Nileshwar for the beautiful and attractive granite works, Idols Nandi and Dwarapalakas. Similarly thanks are due to the carpenters, late Sri Shankararama Varman and Sri Chatu Kerala Varman and their assistants for the wooden work. Committee expresses its gratitude for the good stone work done by masons lead by Sri T. V. Kunhambu Maistry and Sri Ananda Maistry.

We also remember with respect late Sri Aroor Krishnamoorthy Rao who expressed appreciation of our work and offered assistance for the renovation work. Similarly we cannot forget the help rendered by Shankara Vittal Motor Service Co., and its sister concerns.

I regret very much to mention the sad and the sudden demise of one of the secretaries of the committee Sri U Krishna Bhat. We pray for the eternal peace to his soul. He was a guiding star of the activities of the committee and his loss could not be replaced so far. We are really sad to mention that some of the carpenters and masons have died, since the starting of the renovation work in the temple. While the committee places on Record its appreciation of the service rendered by the deceased especially, Sri Govinda Rama Varama, Shankara Rama Varma and Narayana Maistry and pray for peace to their Souls.

The other members of the committee especially the Vice-presidents, the treasurers and the Secretary Sri Ch. Krishna Bhat and the Trustee of the temple have been doing their best to see the completion of the renovation work and the successful performance of the Naveekarana Prathishta Brahmakalasha. in spite of heavy odds.

Hearty thanks are due to the press especially to 'The Hindu', 'Indian Express' 'Deccan Herald', 'Udayavani', 'Navabharatha', 'Mathrubhumi', 'Malayala Manorama', 'Caraval' 'Prajavani 'Sudha' and 'Kannada Prabha' for giving write up in their dailies. We remember with gratitude the local correspondents for their co-operation.

With respect we express our deep sense of gratitude to His Holiness Sri Keshavananda Bharathi Swamiji of Edneer Mutt for the Valuable guidance and advice rendered from the beginning of the Renovation work. Thanks are due to Dr. P. S. Shastri, who has got renovation of several temples to his credit, for the inspiration and guidance given by him to the members of the committee, and for accepting the chairmanship of the Reception committee.

The committee expresses its gratitude to the able guidance given by the shilpi Sri Shridhara Karanth and to all the carpenters, masons and others who have worked for the noble cause.

We offer our sincere thanks to Sri Y. S. V. Bhat, chartered accountant and his staff for auditing the account of the temple every year.

Last but not the least important is the service rendered in the noble cause by the students and the staff of Agalpady Annapoorneshwari High School. They have voluntarily responded whenever they were informed of the requirement of their help. The Renovation committee places on Record its deep appreciation of the great and memorable service rendered by them by doing 'Shramadana' and pray the presiding Dieties of the temple to shower their choicest blessings on them all.

Once again I thank one and all who have been kind enough to respond our call for the help and co-operation with us to make the venture a grand success.

**U. P. Kunikullaya,**
*President*
**Renovation Committee.**

*Place* : Kasaragod.
*Date* : 17-5-1982

॥ ಹರಿಃ ಓಂ ॥

ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ ।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯಮಾಮೃತಾತ್ ॥

*

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

*

ಮಹಾದೇವ ದೇವೇಶ ದೇವಾಧಿದೇವ
ಸ್ಮರಾರೇ ಪುರಾರೇ ಯಮಾರೇ ಹರೇತಿ ।
ಬ್ರುವಾಣಃ ಸ್ಮರಿಷ್ಯಾಮಿ ಭಕ್ತ್ಯಾ ಭವಂತಂ
ತತೋ ಮೇ ದಯಾಶೀಲ ದೇವ ಪ್ರಸೀದ ॥

# ಶಿವಾಷ್ಟಕಂ

ಪ್ರಭುಂ ಪ್ರಾಣನಾಥಂ ವಿಭುಂ ವಿಶ್ವನಾಥಂ ಜಗನ್ನಾಥನಾಥಂ ಸದಾನಂದಭಾಜಾಂ ।
ಭವದ್ಭವ್ಯಭೂತೇಶ್ವರಂ ಭೂತನಾಥಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೧ ॥

ಗಲೇ ರುಂಡಮಾಲಂ ತನೌ ಸರ್ಪಜಾಲಂ ಮಹಾಕಾಲಕಾಲಂ ಗಣೇಶಾಧಿಪಾಲಂ ।
ಜಟಾಜೂಟಭಂಗೋತ್ತರಂಗೈರ್ವಿಶಾಲಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೨ ॥

ಮುದಾಮಾಕರಂ ಮಂಡನಂ ಮಂಡಯಂತಂ ಮಹಾಮಂಡಲಂ ಭಸ್ಮಭೂಷಾಧರಂ ತಂ ।
ಅನಾದಿಂ ಹ್ಯಪಾರಂ ಮಹಾಮೋಹಮಾರಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೩ ॥

ತಟಾಧೋನಿವಾಸಂ ಮಹಾಟ್ಟಾಟ್ಟಹಾಸಂ ಮಹಾಪಾಪನಾಶಂ ಸದಾ ಸುಪ್ರಕಾಶಂ ।
ಗಿರೀಶಂ ಗಣೇಶಂ ಸುರೇಶಂ ಮಹೇಶಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೪ ॥

ಗಿರೀಂದ್ರಾತ್ಮಜಾಸಂಗೃಹೀತಾರ್ಧದೇಹಂ ಗಿರೌ ಸಂಸ್ಥಿತಂ ಸರ್ವದಾಸನ್ನಗೇಹಂ ।
ಪರಬ್ರಹ್ಮಬ್ರಹ್ಮಾದಿಭಿರ್ವಂದ್ಯಮಾನಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೫ ॥

ಕಪಾಲಂ ತ್ರಿಶೂಲಂ ಕರಾಭ್ಯಾಂ ದಧಾನಂ ಪದಾಂಭೋಜನಮ್ರಾಯ ಕಾಮಂ ದದಾನಂ ।
ಬಲೀವರ್ದಯಾನಂ ಸುರಾಣಾಂ ಪ್ರಧಾನಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೬ ॥

ಶರಚ್ಚಂದ್ರಗಾತ್ರಂ ಗುಣಾನಂದಪಾತ್ರಂ ತ್ರಿನೇತ್ರಂ ಪವಿತ್ರಂ ಧನೇಶಸ್ಯ ಮಿತ್ರಂ ।
ಅಪರ್ಣಾಕಲತ್ರಂ ಚರಿತ್ರಂ ವಿಚಿತ್ರಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥ ೭ ॥

ಹರಂ ಸರ್ಪಹಾರಂ ಚಿತಾಭೂವಿಹಾರಂ ಭವಂ ವೇದಸಾರಂ ಸದಾ ನಿರ್ವಿಕಾರಂ ।
ಶ್ಮಶಾನೇ ವಸಂತಂ ಮನೋಜಂ ದಹಂತಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥೮॥

ಸ್ತವಂ ಯಃ ಪ್ರಭಾತೇ ನರಃ ಶೂಲಪಾಣೇಃ
ಪಠೇತ್ಸರ್ವದಾ ಭರ್ಗಭಾವಾನುರಕ್ತಃ
ಸ ಪುತ್ರಂ ಧನಂ ಧಾನ್ಯಮಿತ್ರಂ ಕಲತ್ರಂ
ವಿಚಿತ್ರಂ ಸಮಾಸಾದ್ಯ ಮೋಕ್ಷಂ ಪ್ರಯಾತಿ ॥ ೯ ॥

# ಜಪಯಜ್ಞಮಹಿಮಾ

ಪ್ರೊ. ಎಂ. ರಾಮಕೃಷ್ಣ ಭಟ್ಟ

ಮಹಾಮುನಿಪರಾಯಣಂ ಮಥಿತವಿಘ್ನಮಾಯಾಗಣಂ
ಮನೋಜ್ಞಗುಣಕಾರಣಂ ಮಣಿಗಣೋಜ್ಜ್ವಲಾಭೂಷಣಂ ।
ಮುಹುಃ ಶರಣಮಾಶ್ರಯೇ ಸಕರುಣಂ ಮನೋಮಂದಿರೇ
ಮಹಾಗಣಪತಿಂ ಸ್ಥಿರಂ ಮಹಿತಮಂತ್ರಲೇಖಶ್ರಿಯೇ ॥ ೧ ॥

ಋಷೀಣಾಂ ಪೂರ್ವೇಷಾಮಚಲತಪಸಾರಾಧಿತಮನಾಃ
ಜಗನ್ಮಾತ್ರಾಪ್ಯತ್ರ ವ್ಯಥಿತಸುತಸಂಜಾತಕೃಪಯಾ ।
ಉಪರ್ಯಾಖ್ಯೇ ಚಿತ್ತೇಽಂಗಣಪದಪರೇ ಪಾವಿತಕಲೌ
ಮಹಾದೇವೋ ದೇವ್ಯಾ ಸಹ ವಿಜಯತೇ ಧಾಮ್ನಿ ಪರಮೇ ॥ ೨ ॥

ಉರ್ವರಾಂಗಣಮಿತೀಹ ಕೇಚನ ಕ್ಷೇತ್ರಮೇತದಪರೇ ಗೃಣಂತ್ಯಪಿ ।
ಉಸ್ರವದ್ಹ್ರದಮತಲ್ಲಿಕೇತಿ ವಾ ಯೇ ವಿದುಸ್ತದುರು ಪೂರ್ವವೈಭವಂ ॥ ೩ ॥

ಅಷ್ಟಾದಶಸೋಪಾನಶ್ರೇಣ್ಯಾ ಉಪರಿಸ್ಥಿತೇಽಂಗಣೇ ರಮ್ಯೇ ।
ಪ್ರಾಸಾದೋಽಪಿ ಪವಿತ್ರೋ ರಾಜತಿ ರಾಜನ್ವತೀಂ ಭುವಂ ಕುರ್ವನ್ ॥ ೪ ॥

ಶ್ರೀಮೋಹಿನೀಭವಭವೋ ಭವಭೀತಿಹರ್ತಾ
ಶಾಸ್ತೇತಿ ಶಸ್ತಮಹಿಮಾ ಹಿಮವತ್ಪ್ರಧಾನೈಃ ।
ದೇವೈರ್ದಿವಾಕರಸಹಸ್ರಮಹಾ ಮಹಾತ್ಮಾ
ಲೋಕಾವನಾಯ ವಸತೀಹ ಸುಖಂ ಸುವಾಸ್ತೌ ॥ ೫ ॥

ವಿಭ್ರಾಜಂತೇಽತ್ರಾನ್ಯೇ ಪ್ರಾಸಾದಾ ದೇವತಾಪ್ರಕಾಂಡಾನಾಂ ।
ವಿಘ್ನೇಶಪ್ರಮುಖಾಣಾಂ ಧರ್ಮಂ ಸತ್ಕರ್ಮಬೋಧಯಂತೋ ನಃ ॥ ೬ ॥

ಯಜ್ಞಾನಾಂ ಜಪಯಜ್ಞಂ ಭಗವಾನಾತ್ಮಾನಮಾಹ ಗೀತಾಸು ।
ಸರ್ವೇಽಪಿ ತತಃ ಪಂಚಾಕ್ಷರೀಜಪಂ ಲೇಖನೇನ ತನ್ವಂತು ॥ ೭ ॥

ಮಂತ್ರಲೇಖನಪರಃ ಶ್ರಿಯಮೇತಿ ಶ್ರೋತ್ರಿಯತ್ವಮತುಲಂ ಸುಯಶೋಪಿ ।
ಚಕ್ಷುಷಾ ಹಿ ಮನಸಾ ಚ ಮನೀಷೀ ಪಾಣಿನಾ ತ್ರಿತಯಯಜ್ಞಮುಪಾಸ್ತೇ ॥ ೮ ॥

ಶಿವಸದನಮಿದಂ ಮನೋ ಮದೀಯಂ
ಹರತಿ ಸಮಂ ಪ್ರಥಮಂ ಸಮೀಕ್ಷಿತಂ ದ್ರಾಕ್ ।
ಕ್ರಮುಕವನಸಕೇರಶಾಲಿಭೂಮ್ಯಾ
ಪರಿವೃತಮಾಪಗಯಾ ಶುಭಾಂಭಸಾ ಚ ॥ ೯ ॥

ಶಂಭೋ ಪಾಯಾಃ ಪಾಪಭಾರಾವಭುಗ್ನಾನ್
ಸಂಸಾರೋತ್ಥೈಃ ಕ್ಲೇಶಜಾಲೈರ್ಮುಮೂರ್ಷೂನ್ ।
ರಕ್ಷಾಹೀನಾನ್ ಸ್ವಾತ್ಮಜಾನ್ಮೋಹ್ಯಧನ್ಯಾಂ
ಸ್ತ್ವತ್ ಕಾ ಮಾತಾ ಕಃ ಪಿತಾ ನಃ ಸುಬಂಧುಃ ॥ ೧೦ ॥

ಧರ್ಮಶ್ರದ್ಧಾ ವರ್ಧತಾಂ ಭಾರತೀಯೇ
ಷ್ವೈಕ್ಯಂ ಮುಖ್ಯಂ ಚಾಸ್ತವೈರೋಪರೋಧಂ ।
ಧರ್ಮಶ್ರೀಶ್ಚ ಪ್ರಾಜ್ಯಸಾಮ್ರಾಜ್ಯಪೂಜ್ಯಾ
ಜೀಯಾತ್ ಪ್ರತ್ನಾ ಚೋದ್ಧೃತಾಶೇಷಶಲ್ಯಾ ॥ ೧೧ ॥

ದೇವಾನಾಂ ಕರುಣಾಜಲೈರುಪಚಿತಃ ಪಾರಾಯಣೈರ್ಬ್ರಹ್ಮಚೋ-
ಪಾತ್ತೈರ್ವೇದತತೇಶ್ಚ ದೇವಯಜನೈಃ ಪಂಚಾಕ್ಷರೀಸಜ್ಜಪೈಃ ।
ಪತ್ರೋತ್ಥೈರ್ಜನಸೌಹೃದೈಶ್ಚ ಮಧುರೈರುತ್ಸಾಹಸಂವರ್ಧಿತೈ-
ರ್ಭೂಯಾದ್ ಭೂರಿಶಿವಾಯ ಶಂಕರಗೃಹೇ ಕುಂಭಾಭಿಷೇಕೋತ್ಸವಃ ॥ ೧೨ ॥

ಓಂ ತತ್ಸತ್

೭-೧೨-೧೯೮೧.

ॐ



ವರವಧು ಪಾರ್ವತೀಸುತ ವಿನಾಯಕನಾ ಗಣ-
ನಾಯಕಂ ಸುರಾ
ಸುರರಭಿವಂದಿತಂ ನುತ ವಿನಾಯಕ ನಾ-
ಪನೆಯೊಂದನಾಂತನೀ-
ಶ್ವರನುತನಾವನಾ ಕಲೆಗಧೀಶ್ವರ
ನಾವ ನಾವಗಂ ಕಂಟಕ
ಕ್ಕರಿಯುವನಾ ವಿನಾಯಕನೆ ಮಂಗಳ
ಮೊಗೆಮಗೊಲ್ದು ಸಂತತಂ ॥

卐



ಸಲೆ ಸಕಲಾವನೀರಮೆಗಧೀಶ್ವರನಾಗಿ ವಿರಾಗಿ
ಯೆಂತಿರಲ್
ನೆಲೆಸಿರೆ ಶೀಲೆ ಪಾರ್ವತಿಯುವಳ್ ತನತಂ-
ಗದೊಳೆಂದಿರಲ್ಕವಂ
ಬಲಯುತ ಕಾಮನಂ ಹರಿಸಿ ವಿಶ್ವಪರಾಸ್ತ
ಸರಾಗ ಭೋಗಿಯೆ-
ನ್ನಲವನೆಯಲ್ತೆ ಪಾವನನಜೇಯ
ಪಿನಾಕಿ ಕಪಾಲಿ ವಂದಿಪೆಂ

ರಚಯಿತ : ಜಿ. ಕೆ. ಭಟ್ಟ, ಮಧುರಕಾನನ,

## ಪೌರಾಣಿಕ ಹಿನ್ನೆಲೆಯುಳ್ಳ ಪವಿತ್ರ ಪ್ರಾಚೀನ ಪುಣ್ಯಕ್ಷೇತ್ರ

# ಉಬ್ರಂಗಳ ಶ್ರೀ ಮಹಾದೇವಪಾರ್ವತೀ ದೇವಸ್ಥಾನ

ಕಾಸರಗೋಡು ತಾಲೂಕಿನ ಉಬ್ರಂಗಳ ಗ್ರಾಮದಲ್ಲಿರುವ ಶ್ರೀ ಮಹಾದೇವ ಪಾರ್ವತೀ ಮತ್ತು ಕುದ್ಕಳಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನಗಳು ಬಹಳ ಪ್ರಾಚೀನವೂ ಪವಿತ್ರವೂ ಆದ ದೇವಸ್ಥಾನಗಳಾಗಿವೆ, ಇವುಗಳಲ್ಲಿ ಶ್ರೀ ಮಹಾದೇವ ಪಾರ್ವತೀ ದೇವಸ್ಥಾನದ ಐತಿಹ್ಯ ಬಹಳ ವಿಶಿಷ್ಟವಾಗಿದೆ. ದ್ವಾಪರಯುಗದ ಅಂತ್ಯದಲ್ಲಿ ಭಗವಾನ್ ಪರಶುರಾಮನು ತನ್ನ ವಿಶ್ವಪರ್ಯಟನ ವೇಳೆಯಲ್ಲಿ, ಭಾಸ್ವತಿ, ಚಂದ್ರಿಕಾ, ಅನಲಾ, ಎಂಬ ತ್ರಿವೇಣೀ ಸಂಗಮದ ( ಕುಂಬ್ಡಾಜೆ ಗ್ರಾಮದ ನೇರಪಾಡಿ ) ಬಳಿ ಇರುವ ಪ್ರಶಾಂತವಾದ ಘೋರ ಅರಣ್ಯದಲ್ಲಿ ಸರ್ವವ್ಯಾಪಿಯಾದ ಜಗನ್ನಿಯಾಮಕನನ್ನು ಹಲವಾರು ದಿನ ತಪಸ್ಸು ಮಾಡಿ ಪ್ರಾರ್ಥಿಸಿದಲ್ಲಿ ಜ್ಯೋತಿರೂಪದಲ್ಲಿ ಶ್ರೀ ಶಾಸ್ತಾರ' ಪಾರ್ವತಿಮಹಾದೇವರು ಪ್ರತ್ಯಕ್ಷರಾದರು. ಅನಂತರ ಶ್ರೀ ಶಾಸ್ತಾರ ಮತ್ತು ಮಹಾದೇವರು ಸ್ವಯಂಭೂರೂಪದಲ್ಲಿ ( ಉದ್ಭವ ಲಿಂಗ ) ಕಾಣಿಸಿಕೊಂಡರು. ಶ್ರೀ ಶಾಸ್ತಾರ ಉದ್ಭವಿಸಿದ ಸ್ಥಳಕ್ಕೆ " ಕಾಟ್ನೂಜಿ " ಎಂಬ ಹೆಸರು. ಈ ಸ್ಥಳವು ಶ್ರೀ ಮಹಾದೇವಕ್ಷೇತ್ರದ ಪಡು ದಿಕ್ಕಿನಲ್ಲಿ ಅರ್ಧ ಮೈಲು ದೂರದಲ್ಲಿದೆ. ತ್ರಿವೇಣೀಸಂಗಮದ ಬಳಿ ಮುನಿಗಳು ಋಷಿಗಳು ತಪಸ್ಸು ಮಾಡುತ್ತಿದ್ದರೆಂದೂ, ಹತ್ತಿರವೇ ಇರುವ " ಮುನಿಯೂರು " ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದರೆಂದೂ ಪ್ರತೀತಿಯಿದೆ. ಮುನಿಗಳೂ, ಋಷಿಗಳೂ, ದೇವತೆಗಳೂ ತ್ರಿವೇಣೀ ಸಂಗಮದಲ್ಲಿ ಸ್ನಾನಮಾಡಿ ದೇವದರ್ಶನಕ್ಕೆಬಂದು ಹೋಗುತ್ತಿದ್ದ ಗುಹಾದ್ವಾರದ ಕುರುಹುಗಳನ್ನು ಈಗಲೂ ಕಾಣಬಹುದು.

2500 ವರ್ಷಗಳ ಹಿಂದೆ ಒಂದು ದಿನ ಬೇಟೆಗಾರನೊಬ್ಬ ಅವನಿಗೆ ಕಾಣಸಿಕ್ಕಿದ ಮೊಲವನ್ನು ಹಿಡಿಯಲೋಸುಗ ಅರಣ್ಯವನ್ನು ಪ್ರವೇಶಿಸಿದಲ್ಲಿ ಸ್ವಲ್ಪ ದೂರ ಹೋದ ಮೊಲ ಒಂದು ದಿನ್ನೆಯ ಬಳಿ ತಲಪಿದಾಗ ಥಕ್ಕನೆ ಅದೃಶ್ಯವಾಯಿತು. ಆಗ ಆಶ್ಚರ್ಯಗೊಂಡ ಬೇಟೆಗಾರನು ತಲೆಯೆತ್ತಿ ಮೇಲೆ ನೋಡಲು ಕಂಡ ಒಂದು ದೃಶ್ಯವೇ ದೇವಸ್ಥಾನದ ಸ್ಥಾಪನೆಗೆ ಕಾರಣವಾಯ್ತು. ಶ್ರೀ ಪಾರ್ವತೀ ದೇವಿಯು ರತ್ನಖಚಿತವಾದ ಉಯ್ಯಾಲೆಯಲ್ಲಿ ಓಲಾಡುತ್ತಿರುವುದನ್ನೂ ಬಳಿಯಲ್ಲೇ ಶ್ರೀ ಮಹಾದೇವನು ನಾಗಸರ್ಪನಾಗಿ ತನ್ನ ಹೆಡೆಯೆತ್ತಿ ಉಯ್ಯಾಲೆಯ ತೂಗಾಟಕ್ಕೆ ಅನುಗುಣವಾಗಿ ತಲೆಯಾಡಿಸುತ್ತಿರುವುದನ್ನೂ ಕಂಡ ಬೇಟೆಗಾರನು ಈ ವಿಷಯವನ್ನು ಓಡಿ ಬಂದು ಊರವರಿಗೆ ತಿಳಿಸಿದಾಗ ಊರ ಜನರು ತ್ರಿವೇಣೀತೀರ್ಥದೊಡನೆ ವೇದ, ವಾದ್ಯ ಘೋಷದೊಡನೆ ಬಂದು, ಅಭಿಷೇಕ ಪೂಜಾದಿಗಳನ್ನುಮಾಡಿಆಲೋಚಿಸಿ ಶಾಸ್ತ್ರೋಕ್ತವಾಗಿ ದೇವಸ್ಥಾನದ ಮಂಟಪ ಗೋಪುರಗಳನ್ನು ರಚಿಸಿ ಬ್ರಹ್ಮಕಲಶಾದಿಗಳನ್ನು ಮಾಡಿದರು. ಅನಂತರ ಪೂಜೆ ವಿನಿಯೋಗಾದಿಗಳೂ ಉತ್ಸವಗಳೂ ನಡೆದು ಬರುತ್ತಿದ್ದವು.

ಈ ಕ್ಷೇತ್ರದಲ್ಲಿ ಪಾರ್ವತೀ ಮಹಾದೇವ ದೇವರ ಸಾನ್ನಿಧ್ಯವಲ್ಲದೆ ಶ್ರೀ ಶಾಸ್ತಾರ, ಶ್ರೀ ಗಣಪತಿ, ಶ್ರೀ ಸುಬ್ರಹ್ಮಣ್ಯ, ಶ್ರೀ ಪರಶುರಾಮ ಮೊದಲಾದ ದೇವರ ಸಾನ್ನಿಧ್ಯವೂ ಇದೆ.

ಆದರೆ 300 ವರ್ಷಗಳಿಗೂ ಹಿಂದೆ ಈ ಪುಣ್ಯಕ್ಷೇತ್ರವು ವೈರಿಗಳ ಧಾಳಿಯಿಂದ ಬೆಂಕಿಗಾಹುತಿಯಾಯಿತು. ಆದರೂ ತಾತ್ಕಾಲಿಕ ದುರಸ್ತಿಗಳನ್ನು ಮಾಡಿ ಪೂಜಾ ವಿನಿಯೋಗಾದಿಗಳೂ, ಉತ್ಸವಗಳೂ ಈ ವರೆಗೆ ಜರಗುತ್ತಾ ಇದ್ದುವು. ಅದೇ ರೀತಿ ಬಳಿಯಲ್ಲೇ ಇರುವ ಕುದ್ಕಳಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನ ಕೂಡಾ ಕ್ಷೀಣಾವಸ್ಥೆಯಲ್ಲಿದೆ.

ತೆಂಗು ಕಂಗುಗಳಿಂದ, ಭತ್ತದ ಗದ್ದೆಗಳಿಂದ ಸುತ್ತಲೂ ಹಚ್ಚಹಸುರಾಗಿ ಕಂಗೊಳಿಸುವ ಪ್ರಕೃತಿ ರಮಣೀಯವಾದ ವಿಶಾಲವಾದ ಬಯಲಿನ ಮಧ್ಯದಲ್ಲಿ ಸುಮಾರು ೧೨ ಅಡಿ ಎತ್ತರದ ವಿಸ್ತಾರವಾದ ಸಮತಟ್ಟಾದ ಜಾಗದ ಮೇಲೆ ದೇವಸ್ಥಾನವು ಶೋಭಿಸುತ್ತದೆ. ಇಲ್ಲಿನ ಪ್ರಧಾನ ದೇವರು ಶ್ರೀ ಮಹಾದೇವ ಪಾರ್ವತಿ. ಹತ್ತಿರವೇ ಇರುವ ಕಾಟ್ಟೂಜಿ ವನದಲ್ಲಿ ಉದ್ಭವ ರೂಪದಲ್ಲಿಯೂ, ದೇವಸ್ಥಾನದಲ್ಲಿ ಪ್ರತಿಷ್ಠಾರೂಪದಲ್ಲಿಯೂ ಮೆರೆಯುವ ಶ್ರೀ ಶಾಸ್ತಾರನಿಗೆ ವಿಶಿಷ್ಟವಾದ ಪ್ರಾಮುಖ್ಯವು ಸಲ್ಲುತ್ತದೆ. ದೇವಸ್ಥಾನಕ್ಕೆ ಹೋಗಲು ಹದಿನೆಂಟು ಮೆಟ್ಟಲುಗಳು (ಪದಿನೆಟ್ಟಾಂಪಡಿ) ಇವೆ. ಮಲಯಾಳ ನಾಡಿನಲ್ಲಿ ಈ ಕ್ಷೇತ್ರಕ್ಕೆ "ವಡಕ್ಕೆ ಶಬರಿಮಲ" ಎಂಬ ಹೆಸರಿದೆ. ಇದು ಕೇವಲ ಆಕಸ್ಮಿಕವಾಗಿ ಬಂದ ಹೆಸರಾಗಿರಲಾರದು. ದೇವಸ್ಥಾನದ ಪ್ರಾಚೀನತೆ ಶ್ರೀ ಶಾಸ್ತಾರನ ಸ್ವರೂಪ (ಕಾಡಿನ ಮಧ್ಯದಲ್ಲಿ ಉದ್ಭವ ರೂಪ) ಮತ್ತು ದೂರದ ಊರುಗಳಲ್ಲಿ ಪ್ರಸಿದ್ಧಿ ಇವುಗಳಿಂದಾಗಿ ಈ ದೇವಸ್ಥಾನಕ್ಕೆ ತುಂಬಾ ಪ್ರಾಧಾನ್ಯವಿದೆಯೆಂಬುದನ್ನು ಮನಗಾಣಬಹುದು. ಶ್ರೀ ವಿಷ್ಣುಮೂರ್ತಿ ಭೂತದ ಆರಾಧನೆಯನ್ನು ಎಷ್ಟು ದೂರದ ಊರಿನಲ್ಲಿ ಮಾಡುವುದಿದ್ದರೂ ಇಂದಿಗೂ 'ಓರಂಗಳ ಶಾಸ್ತಾವೇ' ಎಂದು ಭೂತವು ಕರೆಯುವುದನ್ನು ಕೇಳುತ್ತೇವೆ. ದೇವಸ್ಥಾನದ ಪೂರ್ವೇತಿಹಾಸದ ಕುರಿತು ಪ್ರಯತ್ನ ಮಾಡಿದರೆ ಸಂಶೋಧಕರು ತುಂಬಾ ವಿಷಯಗಳನ್ನು ಹೇಳಬಹುದು.

ದೇವಸ್ಥಾನದ ಮೂಡು ಭಾಗದ ಅಂಗಣದಿಂದ ಹೊರಗೆ ಹತ್ತಿರದಲ್ಲೇ ಎಷ್ಟು ತೆಗೆದರೂ ಆರಿಸಲಾಗದಷ್ಟು ಪ್ರಬಲವಾದ ಒರತೆ ಇರುವ ಒಂದು ಕೆರೆಯಿತ್ತೆಂದು ತಿಳಿದು ಬಂದಿದೆ. ಈ ಕೆರೆಯಿಂದಾಗಿ 'ಉಬ್ರಂಗಳ' ಎಂಬ ಹೆಸರು ಉಂಟಾಯಿತೆಂದೂ ಹೇಳುತ್ತಾರೆ. ಮಲಯಾಳದಲ್ಲಿ 'ಒರವುಳ್ಳ ಕೊಳ' ಅರ್ಥಾತ್ 'ಒರವುಂ ಕೊಳ' ಎಂಬುದು ಕಾಲಕ್ರಮೇಣ 'ಓರಂಗಳ' ಅಥವಾ ಉಬ್ರಂಗಳ' ಎಂದಾಯಿತು, ಎಂದು ಹೇಳುವರು.

ಶ್ರೀ ಶ್ರೀ ಶೃಂಗೇರಿ ಮಠದ ಜಗದ್ಗುರು ಶ್ರೀಮದಭಿನವ ವಿದ್ಯಾತೀರ್ಥ ಶಂಕರಾಚಾರ್ಯ ಸ್ವಾಮೀಜಿಯವರು ಈ ಕ್ಷೇತ್ರಕ್ಕೆ ಆಗಮಿಸಿ ಜೀರ್ಣೋದ್ಧಾರ ಕಾರ್ಯಗಳನ್ನು ವೀಕ್ಷಿಸಿ ಫಲಮಂತ್ರಾಕ್ಷತೆಯನ್ನು ಕೊಟ್ಟು ಬೇಗನೆ ಕೆಲಸ ಪೂರೈಸಲ್ಪಡಲೆಂದು ಹರಸಿದ್ದಾರೆ. ಶ್ರೀ ಎಡನೀರು ಮಠಾಧೀಶರಾದ ಶ್ರೀ ಶ್ರೀ ಕೇಶವಾನಂದಭಾರತೀಸ್ವಾಮಿಗಳು ತಮ್ಮ ದಿವ್ಯಹಸ್ತದಿಂದ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸಿದರಲ್ಲದೆ, ಹಲವು ಬಾರಿ ಇಲ್ಲಿಗೆ ಆಗಮಿಸಿ ಕೆಲಸಗಳನ್ನು ವೀಕ್ಷಿಸಿ ಆಶೀರ್ವದಿಸಿದರು. ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರು ಇಲ್ಲಿಗೆ ಆಗಮಿಸಿ, ಮೂಡುಗೋಪುರದ ಶಿಲಾನ್ಯಾಸ ಮಾಡಿ ಸೂಕ್ತ ಸಲಹೆಗಳನ್ನಿತ್ತರು. ಶ್ರೀ ಮದ್ರಾಮಚಂದ್ರಾಪುರ ಮಠದ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳವರು ಕೂಡಾ ಇತ್ತೀಚೆಗೆ ಇಲ್ಲಿಗೆ ಆಗಮಿಸಿ ಆದಷ್ಟು ಬೇಗನೆ ಕೆಲಸಗಳು ನೆರವೇರಲೆಂದು ಹರಸಿದರು. ತಾ. 2–2–81 ರಂದು ಶ್ರೀ ಪೇಜಾವರ ಮಠದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರೂ, ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಭೂಷಣತೀರ್ಥ ಶ್ರೀಪಾದಂಗಳವರೂ ಶ್ರೀಕ್ಷೇತ್ರಕ್ಕೆ ಆಗಮಿಸಿ ಜೀರ್ಣೋದ್ಧಾರಕಾರ್ಯಗಳನ್ನು ವೀಕ್ಷಿಸಿ ಬೇಗನೆ ಕೆಲಸ ಸಂಪೂರ್ಣವಾಗಲೆಂದು ಹರಸಿದ್ದಾರೆ.

ಇಲ್ಲಿನ ಗೋಪುರಗಳಲ್ಲಿ ಮೂಡುಗೋಪುರಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಪ್ರತಿವರ್ಷ ವೃಶ್ಚಿಕಮಾಸದಲ್ಲಿ ಜರಗುವ 'ಪಾಟು' ಎಂಬ ವಿಶೇಷ ರೀತಿಯ ಉತ್ಸವದ ಸಂದರ್ಭದಲ್ಲಿ ಈ ಗೋಪುರದಲ್ಲಿ ಶ್ರೀ ಶಾಸ್ತಾರನ ರೂಪವನ್ನು ದಿನಕ್ಕೊಂದು ರೀತಿಯಲ್ಲಿ ಪಂಚವರ್ಣದ ರಂಗವಲ್ಲಿಯಲ್ಲಿ ಬರೆದು ಸ್ತುತಿಸಿ ಪೂಜಿಸುವ ಪದ್ಧತಿಯಿದೆ.

ಬಹುಕಾಲದಿಂದ ಜೀರ್ಣಾವಸ್ಥೆಯಲ್ಲಿದ್ದ ಈ ದೇವಾಲಯವು ಪುನರ್ನವೀಕರಣಗೊಂಡು, ಪ್ರತಿಷ್ಠಾ ಬ್ರಹ್ಮಕಲಶಾದಿ ಕಾರ್ಯಗಳನ್ನು ಪೂರಯಿಸಿ ಉಚ್ಛ್ರಾಯಸ್ಥಿತಿಗೆ ಬಂದ ಬಳಿಕ, ತನ್ನ ದೈವೀ ಪ್ರಭಾವದಿಂದ ಹಾಗೂ ಕಾರಣೀಕತೆಯ ಮಹಿಮೆಯಿಂದ ನಾಡಿನ ಜನತೆಗೆ ಸರ್ವ ಸೌಭಾಗ್ಯವನ್ನೂ ಮಂಗಲವನ್ನೂ ಉಂಟುಮಾಡುವುದರೊಂದಿಗೆ ದೂರ ದೂರ ಪ್ರದೇಶಗಳಿಂದ ಅಸಂಖ್ಯ ಸಂಖ್ಯೆಯಲ್ಲಿ ಭಕ್ತ ಜನರನ್ನೂ ತನ್ನೆಡೆಗೆ ಆಕರ್ಷಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

# ಉಪರಂಗಳ ಶ್ರೀ ಪಾರ್ವತೀಶ್ವರ ಸುಪ್ರಭಾತಂ

ಉತ್ತಿಷ್ಠೋತ್ತಿಷ್ಠ ವಿಶ್ವೇಶ ಉತ್ತಿಷ್ಠ ವೃಷಭಧ್ವಜ
ಉತ್ತಿಷ್ಠ ಪಾರ್ವತೀಕಾಂತ ಭುವನಂ ಮಂಗಲಂ ಕುರು ॥ ೧ ॥

ಹೇ ವಿಶ್ವನಾಥ ನಿಖಿಲಾಗಮವೇದ್ಯ ಶಂಭೋ
ಕಾರುಣ್ಯಪೂರ್ಣ ಮುನಿಮಾನಸರಾಜಹಂಸ ।
ಸಂಪೂರ್ಣಕಾಮ ಸುರಸೇವಿತಪಾದಪದ್ಮ
ಶ್ರೀ ಪಾರ್ವತೀಶ್ವರ ವಿಭೋ ತವ ಸುಪ್ರಭಾತಂ ॥ ೨ ॥

ಶ್ರೀ ಭೂತನಾಥ ಗಣನಾಥ ಷಡಾನನಾದಿ
ಸಾನ್ನಿಧ್ಯಪೂರ್ಣ ನಟರಾಜ ಕಿರಾತಮೂರ್ತೇ ।
ಸಂಸಾರತಾಪದಹನಪ್ರಮಥಾಧಿನಾಥ
ಶ್ರೀ ಪಾರ್ವತೀಶ್ವರ ವಿಭೋ ತವ ಸುಪ್ರಭಾತಂ ॥ ೩ ॥

ವಿಪ್ರಾಃಸ್ತುವಂತಿ ಸತತಂ ವರಮಂತ್ರವರ್ಣೈಃ
ಗಾಯಂತಿ ಗಾಯಕವರಾಸ್ತವ ದೇವ ರೂಪಂ ।
ವೀಣಾದಿನಾಟ್ಯಸುನಿನಾದಸುಹೃಷ್ಟಚಿತ್ತ
ಶ್ರೀ ಪಾರ್ವತೀಶ್ವರ ವಿಭೋ ತವ ಸುಪ್ರಭಾತಂ ॥ ೪ ॥

ಗಂಗಾದಿತೀರ್ಥಪರಿಪೂರಿತಹೇಮಕುಂಭೈಃ
ತ್ವಾಂ ಸ್ನಾಪಯಂತಿ ಜಗದೀಶ್ವರ ವಿಪ್ರವರ್ಯಾಃ ।
ಪ್ರಾತಃ ಪ್ರಬೋಧಮುಪಯಾಹಿ ಶಿವಾಸನಾಥ
ಶ್ರೀ ಪಾರ್ವತೀಶ್ವರ ವಿಭೋ ತವ ಸುಪ್ರಭಾತಂ ॥ ೫ ॥

ಶುದ್ಧಾಯ ನಿರವದ್ಯಾಯ ಸತ್ಯಾನಂದಸ್ವರೂಪಿಣೇ
ಉಬರಂಗಳವಾಸಾಯ ಗೌರೀಶಾಯಾಸ್ತು ಮಂಗಲಂ ॥ ೬ ॥

ರಚಯಿತಾ : ಬಳ್ಳಪದವು ಶ್ರೀ ಮಾಧವ ಉಪಾಧ್ಯಾಯ.

# ಗೀತಗೋವಿಂದ ಪ್ರಬಂಧಃ

॥ ಗುರ್ಜರೀ ರಾಗ ಪ್ರತಿಮಂಠ ತಾಲಾಭ್ಯಾಂ ಗೀಯತೇ ॥

ಶ್ರಿತಕಮಲಾಕುಚಮಂಡಲ ।
ಧೃತಕುಂಡಲ. ॥
ಕಲಿತಲಲಿತ ವನಮಾಲ ।
ಜಯ ಜಯದೇವ ಹರೇ ॥ ೧ ॥

ದಿನಮಣಿಮಂಡಲಮಂಡನ
ಭವಖಂಡನ-
ಮುನಿಜನಮಾನಸಹಂಸ ॥
ಜಯ ಜಯದೇವ ಹರೇ ॥ ೨ ॥

ಕಾಲಿಯವಿಷಧರಭಂಜನ
ಜನರಂಜನ- ।
ಯದುಕುಲನಲಿನದಿನೇಶ ॥
ಜಯ ಜಯದೇವ ಹರೇ ॥ ೩ ॥

ಮಧುಮುರನರಕವಿನಾಶನ
ಗರುಡಾಸನ- ॥
ಸುರಕುಲಕೇಲಿ ನಿದಾನ ॥
ಜಯ ಜಯದೇವ ಹರೇ ॥ ೪ ॥

ಅಮಲಕಮಲದಲಲೋಚನ
ಭವಮೋಚನ - ॥
ತ್ರಿಭುವನ ಭುವನ ನಿಧಾನ ॥
ಜಯ ಜಯದೇವ ಹರೇ ॥ ೫ ॥

# ಗೀತಗೋವಿಂದ ಪ್ರಬಂಧ

(ಜಯದೇವನ ಅಷ್ಟಪದಿಯ ಕನ್ನಡಾನುವಾ

ಗುರ್ಜರೀರಾಗ – ಪ್ರತಿಮಂಠತಾಳ

ಕಿವಿಯಲಿ ಧರಿಸಿಹೆ ಕುಂಡಲ ।
ಕುಚ ಮಂಡಲ-
ವನು ಧರಿಸಿದ ಸಿರಿಲೋಲ ।
ಜಯ ಜಯದೇವ ಹರೇ ॥ ೧ ॥

ರವಿಬಿಂಬದ ತೆರ ಶೋಭಿಪ ।
ಭವ ತಾರಕ ।
ಮುನಿಗಳ ಮಾನಸಹಂಸ ॥
ಜಯ ಜಯದೇವ ಹರೇ ॥ ೨ ॥

ತುಳಿದೆಯಲಾ ನೀ ಕಾಳಿಯ
ಹೆಡೆಮಾಲೆಯ ।
ಯಾದವವಂಶವರೇಣ್ಯ ॥
ಜಯ ಜಯದೇವ ಹರೇ ॥ ೩ ॥

ಮಧು ಮುರ ನರಕ ಸಂಹಾರನೆ ।
ಹಕ್ಕಿ ನೇರನೆ ।
ಸುರಸುಖದಾತನು ನೀನೆ ।
ಜಯ ಜಯದೇವ ಹರೇ ॥ ೪ ॥

ತಾವರೆಯೆಸಳಿನ ಕಂಗಳ ।
ಲೋಕಂಗಳ ।
ಸೃಜಿಸಿದ ಭವಭಯದೂರ ॥
ಜಯ ಜಯದೇವ ಹರೇ ॥ ೫ ॥

ಜನಕಸುತಾಕೃತಭೂಷಣ ।
ಜಿತದೂಷಣ- ॥
ಸಮರಶಮಿತ ದಶಕಂಠ ।
ಜಯ ಜಯದೇವ ಹರೇ ॥ ೬ ॥

ಅಭಿನವಜಲಧರಸುಂದರ
ಧೃತ ಮಂದರ- ॥
ಶ್ರೀಮುಖ ಚಂದ್ರಚಕೋರ
ಜಯ ಜಯದೇವ ಹರೇ ॥ ೭ ॥

ಶ್ರೀ ಜಯದೇವಕವೇರಿದಂ
ಕುರುತೇ ಮುದಂ- ॥
ಮಂಗಲಮುಜ್ವಲಗೀತಂ ॥
ಜಯ ಜಯದೇವ ಹರೇ ॥ ೮ ॥

ಶೃಂಗರಿಸಿದೆ ನೀ ಸೀತೆಯು ।
ನೃಪಜಾತೆಯು ॥
ದೂಷಣ ರಾವಣ ನಾಶ ।
ಜಯ ಜಯದೇವ ಹರೇ ॥ ೬ ॥

ಮೋಡದವೊಲು ಚೆಲುವಾಂತವ ।
ಗಿರಿ ಪೊತ್ತವ ॥
ಸಿರಿಮೊಗವೆಳಸುವ ದೇವ ।
ಜಯ ಜಯದೇವ ಹರೇ ॥ ೭ ॥

ಶ್ರೀ ಜಯದೇವನು ಪೇಳಿದ ।
ಬಲು ಚೆಂದದ ॥
ಶುಭಗೀತವಿದಾನಂದ ॥
ಜಯ ಜಯದೇವ ಹರೇ ॥ ೮ ॥

ಅನು : **ವೆಂಕಟರಾಜ ಪುಣಿಂಚತ್ತಾಯ**

# ನಾಲಗೆ

**" ವಾಣ್ಯೇಕಾ ಸಮಲಂಕರೋತಿ ಪುರುಷಂ**
**ಯಾ ಸಂಸ್ಕೃತಾ ಧ್ಯಾರ್ಯತೇ "**

ಮಾತು ಮಾನವಜೀವನದ ಸಂಸ್ಕೃತಿಯ ಸ್ಪಂದನ. ' ನುಡಿ ' ಮಾನವಜೀವನದ ಅಂತಸ್ತನ್ನು ಬಲಿಯುವ ಸೂತ್ರ. ದೈವಿಕ – ಧಾರ್ಮಿಕಗಳೇ ಆದ ಜೀವನದ ವಿವಿಧ ಮಾರ್ಗಗಳಲ್ಲಿ ಸತತ ಸಹಚರನಾಗಿ ಬಳಿವಿಡಿದು ಬರುವ ಚೇತನ – ಮಾತು !

**" ಮಾತಿನಿಂ ನಗೆನುಡಿಯು . ಮಾತಿನಿಂ ಹಗೆಕೊಲೆಯು**
**ಮಾತಿನಿಂ ಸರ್ವಸಂಪದವು**
**ಲೋಕಕ್ಕೆ – ಮಾತು - ಮಾಣಿಕ್ಯ "**

ಬುದ್ಧಿಜೀವಿಯಾದ ಮಾನವನ ಪಾಲಿಗೆ ದೊರಕಿದ ಸಾಮಾನ್ಯಧರ್ಮವೆಂದು ಖ್ಯಾತವಾದ ಮಾನವಧರ್ಮವು ಬೆಳಗಬೇಕಾದರೆ, ತನ್ಮೂಲಕವಾಗಿ ಜೀವನದಲ್ಲಿ ಹಸುರೊಸಗೆಯನ್ನು ದನಿಗೊಳಿಸಬೇಕಾದ ತ್ಯಾಗ, ಸ್ನೇಹ, ವಿಶ್ವಾಸ ಮೊದಲಾದ ಗುಣವಿಶೇಷಗಳು ರಂಜಿಸಬೇಕಾದರೆ ಅದಕ್ಕೆ ಬೇಕು ಮಾತಿನ ಕೊಡುಗೆ. ಹೃದಯದಲ್ಲಿ ಮೊಳೆದೋರಿ, ಚಿಗುರೇರಿ ಸಂಕಲ್ಪವು ಫಲಿಸಬೇಕಾದರೆ ಅದನ್ನು ಬಿಂಬಿಸಲು ಶಕ್ತವಾದ ಮಾತು ಬೇಕು. ಮಾತಿಲ್ಲವಾದರೆ ಸರ್ವಶೂನ್ಯ. ಮಾತಿನ ಶಕ್ತಿಯಿಂದಲೇ ಬುದ್ಧಿಜೀವಿಯಾದ ಮಾನವನಿಂದು ಧಾರ್ಮಿಕ, ಸಾಂಸ್ಕೃತಿಕ, ನೈತಿಕ, ಕಲಾತ್ಮಕವಾದ ವಿಶಾಲವ್ಯೂಹದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಬೇರೂರಿಸಲು ಶಕ್ತನಾಗಿದ್ದಾನೆ.

ಮಾತು ಮಾನವನ ಸಹಜ ಗುಣ. ಜನನಾನಂತರ ಅಂಗೋಪಾಂಗಗಳು ಬಲಿಯುತ್ತ ಬಂದಂತೆ, ಅಕ್ಷರಗಳು ಹುಟ್ಟುತ್ತ, ಪರಿಸರದ ಪ್ರಭಾವದಿಂದ ಅವು ಸಾರ್ಥಕತೆಯಲ್ಲಿ ಪೋಣಿಸಲ್ಪಟ್ಟು ವ್ಯವಹಾರಕ್ಕಿಳಿಯುತ್ತವೆ. ಈ ಸ್ಥಿತಿಯಲ್ಲಿ ಅವು ಶುದ್ಧವೆನ್ನಬರುವುದಿಲ್ಲ. ಅವು ಆಶಯ ವ್ಯಂಜಕಗಳು ಮಾತ್ರ. ಮಾತಿನ ಗತಿಯು ಅಲ್ಲಿಯೇ ನಿಲ್ಲುವಂತಿಲ್ಲ. ಅವು ಸಂಸ್ಕೃತಿಯ ಸೋಪಾನಕ್ಕೆ, ತನ್ಮೂಲಕ ಸುಪುಷ್ಟ ಜೀವನಸೌಧಕ್ಕೆ ಸುಭದ್ರ ಪಂಚಾಂಗವಾಗ ಬೇಕು. ಹಾಗಾಗಬೇಕಾದರೆ, ಬಾಲ್ಯದಿಂದಲೆ ಅದನ್ನು ಯೋಗ್ಯವಾದ ಚೌಕಟ್ಟಿನಲ್ಲಿ ನಿಯಂತ್ರಿಸಬೇಕು. ಇದಕ್ಕೆ ಬೇಕು ಉತ್ತಮವಾದ ಪರಿಸರ, ಹಾಗೂ ಜೀವನದಲ್ಲಿ ಚೇತನವನ್ನು ತುಂಬಿ, ಮಾತಿಗೆ ಶಕ್ತಿಯನ್ನೊಗಿಸುವ ವಿದ್ಯೆ! ವಿದ್ಯೆಯೆಂದರೆ ಓದು - ಬರಹದಲ್ಲಿ ಮಾತ್ರ ಸೀಮಿತವಲ್ಲ. ನೈತಿಕ, ಧಾರ್ಮಿಕ. ಸಾಂಸ್ಕೃತಿಕ ಚೌಕಟ್ಟಿನಲ್ಲಿ ಜೀವನವನ್ನು ನೆಲೆಗೊಳಿಸಿ " ಸಮಾಜ ಜೀವಿಯೆಂಬ ಮುದ್ರೆಯನ್ನೊತ್ತಿಕೊಂಡ ಮಾನವನನ್ನು ಮಾನವೀಯತೆಯಲ್ಲಿ ತುಂಬುವಂತಿರಬೇಕು. ಇದಕ್ಕೆಲ್ಲ ಮೂಲ ಮಾತೆಂಬ ಸಂಜೀವನ "

**ಕ್ಷೀಯಂತೇ ಕಿಲ ಭೂಷಣಾನಿ ಸತತಂ**
**ವಾಕ್ – ಭೂಷಣಂ ಭೂಷಣಮ್ ॥**

ಮಾತೆಂಬ ಆಭರಣವು ಜೀವನದ ಅಂತಸ್ತನ್ನು ಸುಂದರವಾಗಿಸುವ ಅಪೂರ್ವ ವಸ್ತು. ಅದಕ್ಕೆ ನಾಶವಿಲ್ಲ. ಭಾಗ್ಯಾತ್ ಆ ಮಾತಿನ ಹಿರಿತನವನ್ನು ಪಡೆವ ಭಾಗ್ಯವು ನಮ್ಮದಾಯಿತಾದರೆ " ಜೀವನ ಸೌಂದರ್ಯ "ಕ್ಕೆ ಬೇರೆ ಯಾವ ತೊಡುಗೆಯೂ ಬೇಕಿಲ್ಲ. ಬಾಹ್ಯಾಲಂಕಾರವನ್ನು ಬಯಸಿ, ತನ್ಮೂಲಕ ಪ್ರತಿಷ್ಠೆಯನ್ನು ಸಾಧಿಸಬಯಸುವ ಯತ್ನ ಫಲಪ್ರದವಲ್ಲ. ಬಹುಕಾಲ ಉಳಿವಂತಿಲ್ಲ. ಆದರೆ ಮಾತ್ರ ' ಯೋಗ ' ಬಲದಿಂದ ' ಮಾತು ' ಪ್ರಾಪ್ತವಾಯಿತೆಂದರೆ, ಮಾನವನ ಜೀವಿತದಲ್ಲಿ ಅದಕ್ಕಿಂತ ಹಿರಿದಾದ ಒಂದು ಭಾಗ್ಯವಿಲ್ಲ.

ವ್ಯವಹಾರಕ್ಕೆ, ನಿತ್ಯಪ್ರಾರ್ಥನೆಗೆ, ಧಾರ್ಮಿಕ ದೈವಿಕ ಕ್ರಿಯಾವಿಧಾನಗಳಿಗೆ ಮಾತಿನ ಒರತೆಯಿಲ್ಲವಾದರೆ ಏನೂ ಆಗುವಂತಿಲ್ಲ. ಪಾರಸ್ಪರಿಕವಾದ ವಿಶ್ವಾಸ, ಸಂವೇದನೆ, ಸ್ನೇಹ, ಬಾಂಧವ್ಯ ಮೊಲಾದ ಅನುಪೇಯ ಜೀವನ ಸಂವಿಧಾನಕ್ಕೆ ಅತ್ಯವಶ್ಯವಾದುದು 'ಮಾತು!' ಮಾತು ಮಾನವಜೀವನಕ್ಕೆ ದೇವರಿಂದ ದೊರಕಿದ ಒಂದು ವಿಶಿಷ್ಟ ವರದಾನ.

**ಜಿಹ್ವಾಗ್ರೇ ವಸತೇ ಲಕ್ಷ್ಮೀಃ**<br>
**ಜಿಹ್ವಾಗ್ರೇ ಮಿತ್ರಬಾಂಧವಾಃ**<br>
**ಜಿಹ್ವಾಗ್ರೇ ಬಂಧನಂ ಚೈವ**<br>
**ಜಿಹ್ವಾಗ್ರೇ ಮರಣಂ ಧ್ರುವಮ್** ॥

ಮಾತಿನ ವ್ಯಾಪ್ತಿ ಸಾಮಾನ್ಯವಲ್ಲ. ಮಾತು ಜೀವನದ ಉಳಿವಿಗೂ ಅಳಿವಿಗೂ ಮೂಲ! "ನುಡಿಯು ನಡೆಗೆ ಮೂಲ" ಎಂಬೊಂದು ಮಾತಿದೆ. ಈ ಮಾತು ಶತಶಃ ಶ್ರದ್ಧೇಯವಿದೆ! ನಡೆಯು ಚೆಲುವೇರಬೇಕಾದರೆ, ನಡೆಯು ಜೀವನದ ಬಾಹ್ಯಾಂತರಗಳನ್ನು ಬೆಳಗಬೇಕಾದರೆ ನುಡಿಯ ಸ್ಥಾನ ಹಿರಿದು.

ನುಡಿಯನ್ನು ಬಾಷೆಯೆಂದೆನ್ನುತ್ತಾರೆ. ಇದನ್ನೇ ವಾಣೀ, ಭಾರತೀ, ಸರಸ್ವತೀ ಮೊದಲಾದ ಪದಗಳ ಮೂಲಕ ದನಿಗೂಡುತ್ತಾರೆ. ವಾಕ್ ಸಂಪತ್ತಿನ ಮೂಲವಾಗಿ, ಶುಭ್ರತೆಯಲ್ಲಿ ಬೆಳಗುವ ಸರಸ್ವತೀ ದೇವಿಯೇ ಮಾತಿನ ತಾಯಿ! ಸರಸ್ವತಿ ತನ್ನೊಂದಿಗೆ ಪರಿಸರವನ್ನೂ ಶುಭ್ರ ಶ್ವೇತವಾಗಿ ರೂಪಿಸಿದವಳು. ಅವಳಿಂದ ಅನುಗೃಹೀತನಾದವನು ತನ್ನ ಮಾತಿನ ಮೂಲಕ ತನ್ನನ್ನೂ ಸಮಾಜವನ್ನೂ ಬೆಳಗುವಲ್ಲಿ ಶಕ್ತನಾಗುತ್ತಾನೆ. ಶಕ್ತನಾಗಬೇಕು.

**"ಜಂತೂನಾಂ ನರಜನ್ಮ ದುರ್ಲಭಂ"** ಎಂಬೀ ಮಾತು **"ಮಾನವಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ"** ಎಂಬೀ ಮಾತು ಮಾನವಸಾರ್ಥಕತೆಯ ಮುಂದೆ ಒಂದು ಪಥಪ್ರದರ್ಶನ. ಈ ಮಾತಿನ ಅಂತರಾಳವನ್ನು ಅರ್ಥವಿಸಿ, ದೈವಾತ್ ದೊರಕಿದ ಮಾತಿನ ಬಲದಿಂದ ತಿಳಿಯಬೇಕಾದುದನ್ನು ತಿಳಿದು, ಮಾಡಬೇಕಾದುದನ್ನು ಅರಿತು ನಡೆದರೆ, ಮಾತನ್ನು ಪಡೆದ ಮಾನವನ ಜೀವನ ಸಾರ್ಥಕವಾಯಿತು!

**ಕೆ. ಎಸ್. ಶರ್ಮಾ, ಕಾಸರಗೋಡು.**

## ನಮ್ಮ ನಡತೆ?

ನಾವು ಆರಂಭಿಸುತ್ತೇವೆ, ಮುಗಿಸುವುದಿಲ್ಲ. ಆಡಂಬರ ತೋರುತ್ತೇವೆ, ಕೆಲಸ ಮಾಡುವುದಿಲ್ಲ. ಯಾವುದನ್ನು ಆಚರಿಸುತ್ತೇವೆಯೋ ಅದರಲ್ಲಿ ನಂಬಿಕೆ ಇಡುವುದಿಲ್ಲ. ಯಾವುದರಲ್ಲಿ ನಂಬಿಕೆ ಇಡುತ್ತೇವೆಯೋ ಅದನ್ನು ಪಾಲಿಸುವುದಿಲ್ಲ. ದೊಡ್ಡ ದೊಡ್ಡ ಮಾತನ್ನು ಆಡಬಲ್ಲೆವು, ಆತ್ಮತ್ಯಾಗ ಮಾಡಲಾರೆವು. ಅಹಂಕಾರವನ್ನು ಪ್ರದರ್ಶಿಸಿ ತೃಪ್ತರಾಗುತ್ತೇವೆ. ಯೋಗ್ಯತೆ ಗಳಿಸಲು ಯತ್ನಿಸುವುದಿಲ್ಲ. ಎಲ್ಲ ಕೆಲಸಗಳಿಗೂ ಪರರ ಮುಖ ನೋಡುತ್ತೇವೆ. ಅದರೊಡನೆಯೇ ಪರರ ದೋಷವನ್ನೆತ್ತಿ ಆಕಾಶ ಪಾತಾಳ ಒಂದು ಮಾಡುತ್ತೇವೆ. ಪರರ ಅನುಕರಣೆಯಲ್ಲಿಯೇ ನಮಗೆ ಹೆಮ್ಮೆ. ಪರರ ಅನುಗ್ರಹವೇ ನಮಗೆ ಸನ್ಮಾನ.

ಈ ದುರ್ಬಲ, ಕ್ಷುದ್ರ, ಹೃದಯಹೀನ, ಕರ್ಮಹೀನ, ಧಾಂಭಿಕ, ತಾರ್ಕಿಕ ಮನೋಭಾವಕ್ಕೆ ಧಿಕ್ಕಾರ.

**ಕವಿ ರವೀಂದ್ರರು.**

[ 'ಕಾಮಕೋಟಿ ಪ್ರಭಾ' ಕೃಪೆಯಿಂದ ]

# ಕಲಿಯುಗದಲ್ಲಿ ಪರಮಾತ್ಮನನ್ನು ಕಾಣುವ ದಾರಿ ಯಾವುದೆಂದು ಅರಸುತ್ತೀರಾ ?

## ಇಲ್ಲಿ ಬನ್ನಿ !

ಮಾನವನ ಜೀವನವು ಸಾಂಸಾರಿಕ ಸಂಕಟ ನೋವುಗಳಿಂದಾಗಿ ದುರಂತವಾಗಲೂಬಹುದು; ನಲಿವು ನಲ್ಮೆಗಳಿಂದ ಸುಖಾಂತವಾಗಲೂಬಹುದು. ಹುಟ್ಟು ಸಾವುಗಳೆಲ್ಲ ನಮ್ಮ ಕೈಯೊಳಗಿಲ್ಲ- ನಮ್ಮಿಷ್ಟದಂತಲ್ಲ– ಅದರಲ್ಲಿ ಕಾಣದ ಕೈಯ ಆಟ ಬಹಳಷ್ಟಿದೆ. ಆದರೆ 'ಬದುಕು' ಹಾಗಲ್ಲ. ಅದು ಸಾಧನೆ, ಪ್ರಯತ್ನ ತ್ಯಾಗಗಳನ್ನು ಹೊಂದಿಕೊಂಡು ಆಯಾ ಜೀವಿಯ ಮುಷ್ಟಿಯೊಳಗೆ ಭದ್ರವಾಗಿದೆ, ವಿಧಿಯು ಕಟ್ಟಿಕೊಟ್ಟು ಕಳುಹಿಸಿದರೆ ಅದನ್ನು ಬದಲಾಯಿಸುವ ಸಾಮರ್ಥ್ಯ ಮಾನವನಿಗೆ ಇಲ್ಲವೆನ್ನುತ್ತಾರೆ. ಇದು ನಿಜವೇ ? ಅಹುದು. ನಮ್ಮ ಕಟ್ಟದಲ್ಲಿ ಏನೇನು ಬೇಕೆಂಬುದನ್ನು ನಿರ್ಧರಿಸಿ ಆ ಪ್ರಕಾರ ಬದುಕು ಸಾಗಬೇಕು. ಸ್ವಸಾಮರ್ಥ್ಯ ಕರ್ತವ್ಯನಿಷ್ಠೆಗಳಿಗೆ ಸದಾ ಬೆಲೆಯಿದ್ದೇ ಇದೆ. ವಿಷಯ ಸುಖ, ಆಸೆ, ಸ್ವಾರ್ಥಗಳಿಗೆ ವ್ಯಯಿಸುವ ಬಾಳುವೆಯ ಮುಕ್ಕಾಲು ಭಾಗವನ್ನು ಪ್ರೇಮ, ಭಕ್ತಿ, ಪೂಜೆ, ದೀನ ದಲಿತರ ಸೇವೆ, ಪ್ರಾರ್ಥನೆ ಇವುಗಳತ್ತ ಹರಿಸಿದರೆ ಪರಿಣಾಮದಲ್ಲಿ ಒಳಿತಾಗದೇ ? ದೇವರ ಒಲುಮೆ ದೊರೆಯದೆ ? ಖಂಡಿತ ದೊರಕುತ್ತದೆ. ಇದಕ್ಕೆ 'ಸಂಯಮ' ಬೇಕು. ಸರಸ್ವತಿಯ ಒಲವು ಬೇಕು. ಚಿಕ್ಕಂದಿನಿಂದಲೂ ವಿದ್ಯೆಯನ್ನು ಆಳವಾಗಿ ಅಭ್ಯಾಸಿಸಿ ಪ್ರತಿಭೆಯನ್ನು ಪಡೆಯಬೇಕು. ಶೀಲ ನಿರ್ಮಾಣಕಾರ್ಯ ಬಾಲ್ಯದಲ್ಲೇ ಆಗಬೇಕು. ಬಾಲ್ಯದಲ್ಲಿ ಒಡಮೂಡಿ ಬೆಳೆದ ಶೀಲವು ಮನುಷ್ಯನ ಜೀವನವಿರುವಷ್ಟು ಕಾಲ ಮರೆಯಲಿಕ್ಕಿದೆಯೇ ? ಕಾಸರಕಾನದ ಬೀಜವನ್ನು ಹಾಲಿನಲ್ಲಿಯೇ ನೆನೆಸಿ ಇಟ್ಟರೂ ಕಾಲಾಂತರದಲ್ಲಿ ಅದರ ಕಹಿಯು ಹೋಗಲಿಕ್ಕಿದೆಯೇ ? ಬಾಲ್ಯದಲ್ಲಿ ಶೀಲವು ಅಸ್ಖಲಿತವಾಗಿ ಒಡಮೂಡಿ ಮನುಷ್ಯ ಸಂಯಮಿಯಾದರೆ ಮತ್ತೆ ಅಲ್ಲಿ ದುಷ್ಟ ಶಕ್ತಿಗಳ ಆಟಕ್ಕೆ ಎಡೆಯೇ ಇಲ್ಲ.

ಸರತ್ವಿತೀ ದೇವಿಯ ಒಲವು ಮಾತ್ರ ಸಾಲದು. 'ಕಾಂಚನಂ ಕಾರ್ಯ ಸಿದ್ಧಿದಂ' ಲಕ್ಷ್ಮಿ ನೆಲೆಸಬೇಕಾದರೆ ಬೆಳಬೆಳಗ್ಗೆ ಮನೆಬಾಗಿಲು ತೆರೆದು ದೇವರ ಕೋಣೆಯಲ್ಲಿ ದೀಪವಿರಿಸಬೇಕು. ಸಂಧ್ಯಾಕಾಲಗಳಲ್ಲಿ, ಸೂರ್ಯೋದಯ ಮತ್ತು ಅಸ್ತಮಾನಗಳ ವೇಳೆಯಲ್ಲಿ ಯಾವಾತನು ನಿದ್ರಾಪರವಶನಾಗಿರುತ್ತಾನೋ ಆತನು ಪತಿಯೇ ಆದರೂ ಲಕ್ಷ್ಮಿಯು ಆತನಿಂದ ತೊಲಗಿ ಹೋಗುತ್ತಾಳೆ- ಎಂದರೆ ನೀತಿನಿಯಮಗಳ ಉಲ್ಲಂಘನೆ ಸಲ್ಲದು. ಇಂದು ನೀತಿನಿಯಮಗಳ ಉಲ್ಲಂಘನೆಯಾಗುತ್ತಿರುವುದರಿಂದಲೂ ಧರ್ಮಸಂಕಟವಾಗುತ್ತಿರುವುದರಿಂದಲೂ ಪ್ರಪಂಚ 'ಪರಿಹಾಸ' ವೆಂಬಂತೆ ನಮಗೆ ತೋರುತ್ತಿದೆ.

ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡವನು ಸಂಸಾರದಲ್ಲಿದ್ದರೂ 'ಸನ್ಯಾಸಿ'. ಅದೇ ನೈಷ್ಠಿಕ ಬಹ್ಮಚರ್ಯದ ತತ್ತ್ವ. ಅಂಥವನೇ ಪ್ರೇಮಪೂರ್ಣನು. ಪ್ರೇಮವಿರುವಲ್ಲಿ ದೇವರಿದ್ದಾರೆ. ಎಂದಮೇಲೆ ಪರಮಾತ್ಮನಿಗೆ ಯಾವ ರೀತಿಯಲ್ಲಿ ಬಡವ-ಬಲ್ಲಿದ - ಉಚ್ಚ - ನೀಚ ಭೇದಭಾವಗಳಿಲ್ಲವೋ ಹಾಗೆಯೇ ಸಂಯಮಿಗೂ ಇರುವುದಿಲ್ಲ. ಅವನಲ್ಲಿ ಆಸೆಗಳೇನೋ ಇರಬಹುದು. ಆಸೆಯೇ ಇಲ್ಲವೆಂದಾದರೆ ಪ್ರಪಂಚಕ್ಕೆ ಬರಬೇಕಾಗಿಯೇ ಇರಲಿಲ್ಲ, ಆದರೆ ಆತನ ಆಸೆಯಲ್ಲಿ ಸಾತ್ವಿಕತೆಯೇ ತುಂಬಿರುತ್ತದೆ. ಕಾಮದ ಕುಡಿ ಕೊನರದಂತೆ ಸಂಯಮಿಯು ಜಾಗೃತನಾಗಿರುತ್ತಾನೆ. ಸತತ ಪ್ರಯತ್ನದಿಂದ ಸಂಯಮಿಯಾದರೆ ಅದೇ ಜೀವನದ ಒಂದು ಶ್ರೇಷ್ಠ ಕಲೆಯು. ನೀತಿನಿಯಮಗಳ ನೆಲೆಯೂ ಅದೇ! ಸಂಯಮವು ಸಾಮಾನ್ಯವಾದುದಲ್ಲ. ದೇವರ ಒಂದು ಅಂಶವೇ ಅದು. ಸಂಯಮ ಕಲೆಯು ಸಿದ್ಧಿಸಿತೆಂದಾದರೆ ಆತ್ಮನಲ್ಲಿ ದಿವ್ಯಶಕ್ತಿಯ ಆವಿರ್ಭಾವವಾಗಿದೆ ಎಂದು ಅರ್ಥ. ಸಂಯಮದಿಂದ ಓಜಸ್ಸು, ತೇಜಸ್ಸು, ಯಶಸ್ಸು ತಾನು ಬಯಸದಿದ್ದರೂ ವೃದ್ಧಿಯಾಗುತ್ತದೆ. ಇದೇ ಅಲ್ಲವೇ ಬಾಳಿನ ದಿವ್ಯತತ್ತ್ವ ?

ಸಂಯಮವೇ ದಿವ್ಯ ಪ್ರೇಮ. ದಿವ್ಯ ಪ್ರೇಮವೆಂದ ಮೇಲೆ ಅದು ಕರುಣೆಯಿಂದ ಕೂಡಿಯೇ ಇರುತ್ತದೆ. ಕರುಣೆಯಿಂದೊಡಗೂಡಿದ ಪ್ರೇಮವುಳ್ಳವನಿಂದ ದೀನದಲಿತರ ಸೇವೆ ಶ್ರದ್ಧಾಪೂರ್ವಕ ನಡೆದೀತು. ದೇವರೊಲುಮೆಗೆ ಪ್ರೇಮಸಂಯಮಗಳು ಅತಿ ಅವಶ್ಯ. 'ಎಲ್ಲಿ ಪ್ರೇಮವೋ ಅಲ್ಲಿ ದೇವರು' ಎಂಬ ತಮ್ಮ ಕತೆಯಲ್ಲಿ ಈ ವಿಚಾರವನ್ನು 'ಲಿಯೋ ಟಾಲ್‌ಸ್ಟಾಯ್' ಚೆನ್ನಾಗಿ ವಿವರಿಸಿರುತ್ತಾರೆ. ಮಾರ್ಟಿನನ ಮನೆಗೆ ಯೇಸು ನಿಜರೂಪಿನಿಂದ ಹೋಗಲಿಲ್ಲ. ಹಸಿದವನಾಗಿ, ಬಾಯಾರಿದವನಾಗಿ, ನಿರಾಶ್ರಿತನಾಗಿ ಹೋಗಿದ್ದನು. ಇದರಿಂದ ಬಡ ಬಗ್ಗರ ರೂಪದಲ್ಲಿ ನಿರಾಶ್ರಿತರ ರೂಪದಲ್ಲಿ, ಕೈಯಿಲ್ಲದ ಕಾಲಿಲ್ಲದ ಕಣ್ಣಿಲ್ಲದ ಅಂಗವಿಕಲರ ರೂಪಿನಲ್ಲಿ ವಿವಿಧ ರೂಪಗಳಲ್ಲಿ ದೇವರು ನಮ್ಮ ಪ್ರೇಮ, ಸಂಯಮಗಳ ಸತ್ವ ಪರೀಕ್ಷೆ ನಡೆಸಿರುತ್ತಾನೆ. "ದೀನದಲಿತರ ಸೇವೆ; ದೇವದೇವನ ಸೇವೆ" ಆ ಸೇವೆಯೂ ನಾಟಕವಾಗಿರದೆ ಹಿತವಾಗಿ ಭಕ್ತಿ ಪ್ರೇಮಗಳಿಂದ ಸಮ್ಮಿಳಿತವಾಗಿರಬೇಕು.

ಗುರುಹಿರಿಯರ ಸೇವೆಯು ಔದಾಸೀನ್ಯವಿರಹಿತವಾಗಿ ನಿರಂತರವಾಗಿರಬೇಕು. ಕರ್ತವ್ಯವೆಂಬ ದೃಷ್ಟಿಯಿಂದ ಸಾಗಬೇಕು. ಗುರುಹಿರಿಯರ ಕಷ್ಟಸಂಕಷ್ಟದಿಂದ ನರಳುವವರ, ಬಡಬಗ್ಗರ ಸೇವೆಯಲ್ಲಿ, ಹೆಚ್ಚಿನ ಸೇವೆಯ ಆಸಕ್ತಿ, ಭಕ್ತಿ, ಶ್ರದ್ಧೆ, ಉಂಟಾಗಬೇಕು. ಅಂತಹ ಸಪ್ರೇಮ ಸೇವೆ ರೋಮಾಂಚಕವಾಗುತ್ತದೆ. ಮನಸ್ಸು ಅಂತಹ ಸೇವೆಯಿಂದ ಹರ್ಷನಿರ್ಭರವಾಗುತ್ತದೆ. ಪ್ರೇಮಾಶ್ರುಮಿಳಿತ ನಯನಗಳಿಂದ ಮುಖದ ಶೋಭೆ ಅಧಿಕವಾಗುತ್ತದೆ. ಗದ್ಗದಿತವಾದ ಕಂಠ ಮಧುರವಾಗುತ್ತದೆ. ಹೀಗಿರುವಾಗ ಬೇರೆ ಯಾವುದರ ಚಿಂತೆಗೂ ಅಲ್ಲಿ ಆಸ್ಪದವಿರುವುದಿಲ್ಲ. ಚಂಚಲತ್ವಕ್ಕೂ ಅಲ್ಲಿ ಎಡೆಯಿಲ್ಲ. ತನ್ಮಯತೆ ಅಲ್ಲಿ ಗಾಢವಾಗುತ್ತದೆ. ಆಗ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳೆಂಬ ಮುಕ್ತಿಸೋಪಾನಗಳು ನಮಗೆ ಗೋಚರವಾಗುತ್ತವೆ. ಇದಕ್ಕಿಂತ ಹೆಚ್ಚಿನದನ್ನು ಈ ಸಂಸಾರದಲ್ಲಿ ಆಶಿಸಲಿಕ್ಕಿದೆಯೇ ? ಸಪ್ರೇಮ ಸೇವೆಯೇ ಕಲಿಯುಗದಲ್ಲಿ ಪರಮಾತ್ಮನನ್ನು ಸುಲಭವಾಗಿ ಒಲಿಸುವ ಒಂದನೆಯ ದಾರಿ.

ಪೂಜೆಯ ವಿಚಾರ ಹೇಳುವುದಾದರೆ ಲೋಕಕಲ್ಯಾಣದ ಆಸಕ್ತಿ–ಪ್ರಯತ್ನಗಳೇ ದೇವರ ಪೂಜೆ. ನಮ್ಮೊಳಗೆ ಆತ್ಮನಿದ್ದಾನೆ. "ದೇಹ ದೇಗುಲದ ಗರ್ಭಗುಡಿಗೆ ಆಹ! ನೋಡಿದರೆ ಆಹ್ಲಾದವೆನಗೆ" ಆತ್ಮನು ರಥಿಕನು, ಇಂದ್ರಿಯಗಳು, ಕುದುರೆಗಳು, ಅವಕ್ಕೆ ಕಡಿವಾಣ ಮನಸ್ಸು–ಹೀಗೆ ಸಾಗುತ್ತಿರಲು ಜೀವನರಥ ಮಾನವನ ಗುರಿ ಲೋಕಕಲ್ಯಾಣ ಇದರಿಂದ ದೇವನ ಒಲುಮೆ ಲಭಿಸುತ್ತದೆ.

ನಾವು ಹುಟ್ಟಿನಲ್ಲೇ ಅಪೂರ್ಣರು, ಯಾರು ಪೂರ್ಣರಾಗಿ ಹುಟ್ಟಿದ್ದಾರೆ ? ಯಾರೂ ಇಲ್ಲ. ಅಪೂರ್ಣರಾದ ನಾವು ಪೂರ್ಣತ್ವಕ್ಕೆ ಸಾಗಲು ಬಾಳುವೆಯ ನೂರು ಹೆಜ್ಜೆಗಳಲ್ಲಿ ಪ್ರಯತ್ನ ನಡೆಸುತ್ತಿದ್ದೇವೆ.

**ಓಂ ಪೂರ್ಣಮದಃ**
**ಪೂರ್ಣಮಿದಂ**
**ಪೂರ್ಣಾತ್ ಪೂರ್ಣಮುದಚ್ಯತೇ**
**ಪೂರ್ಣಸ್ಯ ಪೂರ್ಣಮಾದಾಯ**
**ಪೂರ್ಣಮೇವಾವಶಿಷ್ಯತೇ ಓಂ ಶಾಂತಿಃ ಶಾಂತಿಃ**
**ಶಾಂತಿಃ ॥**

ಅಪೂರ್ಣದಿಂದ ಪೂರ್ಣಕ್ಕೆ ಲಂಘಿಸಲು ಪ್ರಾರ್ಥನೆ ಒಂದು ಸಾಧನೆ. ಅಶಾಂತಿಯಿಂದ ಮನುಕುಲ ಬಳಲಿದಾಗ ಶಾಂತಿಃ ಶಾಂತಿಃ ಎಂದು ಉಚ್ಚರಿಸುತ್ತೇವೆ. ಅದೇ ಪ್ರಾರ್ಥನೆ ಮನಸ್ಸಿನ ಆಳದಿಂದ ಇಚ್ಛಿಸಿದುದನ್ನು ಉಚ್ಚರಿಸುತ್ತೇವಲ್ಲ, ಅದುವೇ ಪ್ರಾರ್ಥನೆ. ಪ್ರಾರ್ಥನೆಯು ಕಾರಣಾಂತರಗಳಿಂದ ಇಂದ್ರಿಯವ್ಯಾಪಾರಗಳ ದೆಸೆಯಿಂದ, ಮರೆತ ನಮ್ಮ ಕರ್ತವ್ಯವನ್ನು ಎಚ್ಚರಿಸುತ್ತದೆ. ಪ್ರಾರ್ಥನೆಯು ಜೀವನದ ಉಸಿರು. ದೇಹವನ್ನು ಬದುಕಿಸಲು ಹೇಗೆ ಉಸಿರಾಡುತ್ತೇವೆಯೋ ಹಾಗೆಯೇ ಮಾನವನನ್ನು ದೇವತ್ವದೆಡೆಗೆ ಸಾಗಿಸಲು ಬೇಕಾದಷ್ಟು ಸಮಯದ ತನಕ ಅತ್ಯವಶ್ಯವಾದ ಉಸಿರು ಪ್ರಾರ್ಥನೆ. ಸುಜ್ಞಾನವನ್ನು ಒಳಗೆ ತುಂಬಿಕೊಳ್ಳುತ್ತಾ ಅಜ್ಞಾನವನ್ನು ನಿಶ್ವಾಸದಂತೆ ಬಿಡುತ್ತಾ ಪ್ರಗತಿಯತ್ತ ಸಾಗುವುದಕ್ಕೆ ದಾರಿ ಪ್ರಾರ್ಥನೆ. ಅಪೂರ್ಣರೆಂಬ ಅರಿವು ನಮಗೆ ಬಂದಾಗ ಅಜ್ಞಾನವು ದೂರವಾಗುತ್ತದೆ. ಆತ್ಮ ಜ್ಯೋತಿಯು ಬೆಳಗಲು ಪ್ರಾರಂಭವಾಗುತ್ತದೆ. ಅಜ್ಞಾನದ ಅಂಧಕಾರದಿಂದ ಸುಜ್ಞಾನದ ಭವ್ಯತೆಯ ಕಡೆಗೆ ಒಯ್ಯುವುದು ಪ್ರಾರ್ಥನೆಯ ಕೆಲಸ. ಒಳಿತನ್ನು

ಬಯಸುವವನು ಒಳ್ಳೆಯ ಪ್ರಾರ್ಥನೆಯಿಂದ ದೇವನ ಒಲುಮೆಯನ್ನೂ ಸಂಪಾದಿಸಬಹುದು. ಯಾವನು ಎಂಥ ಕೆಲಸದಲ್ಲಿದ್ದರೂ ಪ್ರಾರ್ಥನೆಯನ್ನು ಕ್ಷಣಕ್ಷಣಕ್ಕೂ ಮಾಡಬಹುದು ಪ್ರಾರ್ಥನೆಯನ್ನು ಮಾಡುವವನಲ್ಲಿ ದೇವತ್ತ್ವವು ವೃದ್ಧಿಗೊಳ್ಳುತ್ತದೆ. ಪೂರ್ಣತೆಯೆಂದರೆ ದೇವತ್ತ್ವ – ಸಾಕ್ಷಾತ್ ಪರಮಾತ್ಮನ ಸ್ವರೂಪ. ಸ್ವಯಂ ಪ್ರಕಾಶವುಳ್ಳ ಪ್ರಸನ್ನ ಪರಮಾತ್ಮನೆಡೆಗೆ ಸಾಗಲು ಹೆದ್ದಾರಿ ಪ್ರಾರ್ಥನೆ. ಅದು ದೇವಮಂದಿರಗಳಲ್ಲಿರುವ ದೇವ ಬಿಂಬಗಳಲ್ಲಾಗಬಹುದು; ಕಂಬಗಳಲ್ಲಾಗಬಹುದು. 'ಬಿಂಬ'ಗಳ ಆಧಾರವಾದರೆ **'ಸೋಽಹಂ ಭಾವೇನ ಪೂಜಯೇತ್'** ಅಂತ ಹೇಳಿದ್ದಾರೆ. ಬಳ್ಳಿಗೆ ಗೂಟ ಆಧಾರ: ಜೀವಿಗೆ ತನ್ನೊಳಗಿನ ದೇವರನ್ನು ತಿಳಿಯಲು 'ಬಿಂಬ' ಆಧಾರ. ಈ ಎಲ್ಲಕ್ಕೆ 'ಅಕಳಂಕ ಗುರು' ಆಧಾರ. 'ಬಿಂಬ'ಕ್ಕೆ ದೈವೀ ಶಕ್ತಿ ಬರಬೇಕಾದರೆ 'ಅರ್ಚಕ' ಭಕ್ತ ಭಕ್ಷಕನಾಗಬಾರದು. ತನ್ನ ಸಂಕಟಗಳ ಪರಿಹಾರದ ಮಾರ್ಗವನ್ನು ಅರಸುತ್ತಾ 'ಬಿಂಬ'ದ ಮುಂದಕ್ಕೆ ಬಂದ ಭಕ್ತನಿಂದ ತನಗೆ ಬೇಕಾದುದನ್ನು ದೋಚಿಕೊಳ್ಳಲು ಅರ್ಚಕನೂ ಆತನ ಪರಿವಾರವೂ 'ದೇವರ'ನ್ನು ಒಂದು ಮಾಧ್ಯಮವನ್ನಾಗಿ ಉಪಯೋಗಿಸಬಾರದು. ಇಂತಹ ಕೀಳ್ತರಗತಿಯ ಜೀವನಮಾರ್ಗವನ್ನು ಕ್ಷೇತ್ರವಾಸಿಗಳು ಕೈಕೊಳ್ಳದಂತೆ ಆಡಳಿತೆ ಮೊಕ್ತೇಸರರೂ ಧರ್ಮದರ್ಶಿಗಳೂ, ಸಾರ್ವಜನಿಕರೂ, ಪೀಠಾಧಿಪತಿಗಳೂ ಕಾಳಿದಾಸ ಕವಿಯು ಶಾಕುಂತಲದಲ್ಲಿ ಕಣ್ವರ ಮೂಲಕ ಲೋಕಕ್ಕೆ ನೀಡಿದ **"ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ"** ಎಂಬ ಅಮೂಲ್ಯ ಸಂದೇಶವನ್ನು ಆಗಾಗ ನೆನಪು ಮಾಡಿಕೊಳ್ಳಬೇಕು. ಪುಣ್ಯಕ್ಷೇತ್ರಗಳ ಪರಿಸರ ನಿಸ್ಪೃಹವಾಗಿರಬೇಕು. ಆಗ ಅರ್ಚಕನ ಪ್ರಭಾವದಿಂದ ಕಲ್ಲು ಸೀಮಾತೀತ ಚೈತನ್ಯದ 'ಶಿವಶಕ್ತಿ' ಆಗುತ್ತದೆ.

**"ಪ್ರತಿಮಾಯಾಂ ತು ಸಾನ್ನಿಧ್ಯಂ ಅರ್ಚಕಸ್ಯ ತಪೋಬಲಾತ್"**

ಯಾವಾತನಲ್ಲಿ ಪ್ರಾರ್ಥನೆಯಿಲ್ಲ ಅಂತಹವನ ಬಾಳುವೆಯು ಡಿ ವಿ ಜಿ ತಮ್ಮ ಕಗ್ಗದಲ್ಲಿ ಹೇಳಿದಂತೆ 'ಸಿಂಬಳದ ನೊಣ' ಆಗುತ್ತದೆ. ನಂಬದಿದ್ದವನು ಪ್ರಹ್ಲಾದನ ತಂದೆ; ನಂಬಿದವನು ಪ್ರಹ್ಲಾದನು; 'ಕಂಬ'ದಿಂದಲೋ 'ಬಿಂಬ'ದಿಂದಲೋ ಅವರಿಗೆ ಮೋಕ್ಷ ಆಯಿತು. ನಂಬಿಯೂ ನಂಬದಿರುವ ಇಬ್ಬಂದಿಯ ಬದುಕು 'ಸಿಂಬಳದ ನೊಣ'ದಂತೆ ಆಗುತ್ತದೆ – ಅಷ್ಟೆ!

ಸಂಯಮ, ಸೇವೆ, ಪೂಜೆ, ಪ್ರಾರ್ಥನೆ ಇವುಗಳ ಮಹತ್ತ್ವವನ್ನು ಅರಿತು ನಿತ್ಯ ಜೀವನದಲ್ಲಿ ತನ್ಮಯತೆಯಿಂದ ಅನನ್ಯಮನಸ್ಕರಾಗಿ ನಡೆಯುತ್ತಾ ಬಂದರೆ ಕಲಿಕಾಲದಲ್ಲೂ ದೇವನೊಲುಮೆಯ ಸಂಪಾದನೆ ಸಾಧ್ಯ. ಹಗ್ಗವಿಲ್ಲದ ಬಂಧನದಿಂದ ಪಾರಾಗಿ ರಸಮಯ ಅಕ್ಷಯ ಸುಖಿ - ಪರಮಾತ್ಮನನ್ನು ದೇಹ ದೇಗುಲದಲ್ಲಿಯೇ ಕಂಡು ಆ ಸುಖವನ್ನು ಉಂಡು, ಬದುಕಿನ ಕಾಲಾವಧಿಯಲ್ಲಿಯೇ ಅಮಿತ ಸಂತಸದಾಳಬಹುದು.

*

( ಸಾಧುಸಂತರ ಅಭಿಪ್ರಾಯಗಳ ಆಧಾರದಿಂದ )

**ಗೋಪಾಲಕೃಷ್ಣ ಭಟ್ಟ, ಮಧುರಕಾನನ.**
**ಶ್ರೀ ಅನ್ನಪೂರ್ಣೇಶ್ವರೀ ಹೈಸ್ಕೂಲ್, ಅಗಲ್ಪಾಡಿ.**

# ಶಿವ - ಶಕ್ತಿ

೧

"ಮಹದೇವ" ಪುರದಲ್ಲಿ
ನಿನ್ನ ಪದತಲದಲ್ಲಿ
ಅರಳಿ ನಲಿಯುತ ಕಂಪ
ಸೂಸುತ್ತ ದಿಸೆಯಲ್ಲಿ
ಪಸರಿಹುದು ಮೂಡಣದ ಜಲಧಿ ತನಕ
ನವತೇಜ ಜನತೆಯಲಿ
ನವಶಕ್ತಿ ಧಮನಿಯಲಿ
ಹೊನಲಾಗಿ ಹರಿವಂತೆ
ತುಂಬಿ; ನಡೆಸುತಿಹೆ ಓ ನಿನ್ನ ಮಹಿಮೆಯಲಿ.

೨

ಜೀವನದ ಪಥದಲ್ಲಿ
ಭಾವನೆಯ ಅಲೆಯಲ್ಲಿ
ಧ್ಯೇಯ ಸಾಧನೆ ತತ್ವ
ತೋರುತ್ತಲಿರುವಲ್ಲಿ
ನವಜ್ಯೋತಿ ಬೆಳಗಿದುದು ಚಂದಿರನ ತನಕ
ಹಿರಿದಾದ ಖ್ಯಾತಿಯಲಿ
ಅನವರತ ಪ್ರೀತಿಯಲಿ
ತುಂಬಿ; ನಡೆಸುತಿಹೆ ಓ ನಿನ್ನ ಮಹಿಮೆಯಲಿ.

೩

ಸಾಹಿತ್ಯ ರಸ, ಭಾವ
ತುಂಬಿ ಸಾರುವ ಜೀವ
ಮನವನ್ನು ಸೆಳೆಯುವುದು
ಸೇವೆಗೊಳ್ಳುವ ದಾಹ
ಬಯಸುವುದು ಪರಶಿವೆಯ ವರದ ರಥುಲಕ
ಶಾಂತಿಯಲಿ, ತನುಮನವ
ನಕ್ಕು - ನಗಿಸುತಲಿರುವ
ಸಂಘ ಜೀವನ ಶಕ್ತಿ
ತುಂಬಿ; ನಡೆಸುತಿಹೆ ಓ ನಿನ್ನ ಮಹಿಮೆಯಲಿ.

೪

ವಾರಿಧಿಯ ಗಾಂಭೀರ್ಯ
ಹರೆ ಜೇನ ಮಾಧುರ್ಯ,
ಭಟ್ಟಿ ಇಳಿಸುತ ವೇದ,
ಶಾಸ್ತ್ರ ತೀಡುವ ಸಾರ,
ಮೊಳಗಿಸಿದೆ ದುಂದುಭಿಯ ಸ್ವರ್ಲೋಕ ತನಕ
ಜಾತಿ ಭೇದವನಾರು
ಎಣಿಸುವರು ನೀ ಬಾರ!
ಪೂರ್ಣಚಂದ್ರನ ತೇಜ
ತುಂಬಿ; ನಡೆಸುತಿಹೆ ಓ ನಿನ್ನ ಮಹಿಮೆಯಲಿ.

ಕೆ. ಈಶ್ವರ ಭಟ್

# ಶೋಭಮಾನಳಹ
# ಹೈಮವತಿಯಾದುಮೆಯ ಬಳಿಗೆ

[ ಕೇನೇಷಿತಂ ಪತತಿ ಪ್ರೇಷಿತಂ ಮನ ... ಎಂದು ಮೊದಲಾಗಿ 'ಕೇನ' ಎಂಬ ಪದದಿಂದ ಪ್ರಾರಂಭವಾಗುವ ಉಪನಿಷತ್ ಕೇನೋಪನಿಷತ್. ಇದು ಸಾಮವೇದದ ತಲವಕಾರ ಬ್ರಾಹ್ಮಣಕ್ಕೆ ಸೇರಿದ್ದು. ಪರಬ್ರಹ್ಮವು ಸಕಲೇಂದ್ರಿಯಪ್ರೇರಕವಾದರೂ ಎಲ್ಲಾ ಇಂದ್ರಿಯಗಳನ್ನು ಮೀರಿದ್ದು; ಬ್ರಹ್ಮಸ್ವರೂಪವನ್ನು ಇತರರಿಗೆ ತಿಳಿಸಲು ಅಸದಳ. ಬ್ರಹ್ಮಜ್ಞಾನ ತಮಗಿದೆ ಎಂಬವರಿಗೆ ಏನೂ ತಿಳಿಯದು; ತಮಗೆ ತಿಳಿದಿಲ್ಲವೆಂಬ ವಿನಯವಂತರಿಗೆ ತಿಳಿಯಬಲ್ಲದು ಎಂದು ಮೊದಲಿನ ಎರಡು ಖಂಡಗಳಲ್ಲಿ ವಿವರಿಸಿ ಮತ್ತೆ ಮೂರನೆಯ ಖಂಡದಲ್ಲಿ ಒಂದು ಸುಂದರ ಕಥೆಯ ಮೂಲಕ ಈ ವಿಷಯವನ್ನು ಸ್ಪಷ್ಟಗೊಳಿಸಲಾಗಿದೆ. ಬ್ರಹ್ಮ, ಯಕ್ಷರೂಪದಿಂದ ಕಾಣಿಸಿದಾಗ ಅಗ್ನಿವಾಯುಗಳಿಗೆ ಅದೇನೆಂದು ತಿಳಿಯದೆ, ಇಂದ್ರನ ಮರೆಹೊಗಲು, ಆತನಿಗೆ ಆಕಾಶದಲ್ಲಿ ಬಹುಶೋಭಮಾನಳಾದ ಹೈಮವತಿಯಾದ ಉಮೆಯ ದರ್ಶನವಾಗಿ ಬ್ರಹ್ಮವೇನೆಂದು ಅರಿವಾಯಿತು. ಮಿಂಚಿನ ಹೊಳಪಿನಂತೆ ಶ್ರೀಘ್ರಪ್ರಕಾಶನಸ್ವಭಾವದ್ದಾಗಿ, ಮನಸ್ಸು ಇಷ್ಟವಸ್ತುವಿನ ಕಡೆಗೆ ಶೀಘ್ರ ಹರಿದು ಹೋಗುವಂತೆ ಬ್ರಹ್ಮ ಮನಸ್ಸಿನಲ್ಲಿ ಹೊಳೆಯುವುದೆಂಬ ಉಪಮಾನಮೂಲಕ ಬ್ರಹ್ಮವನ್ನು ಬಯಸುವುದರಿಂದ ಮನಸ್ಸು ಆ ಕಡೆಗೆ ಹೋಗುತ್ತದೆಯೆಂಬ ಬ್ರಹ್ಮಜ್ಞಾನದ ಸಿದ್ಧಾಂತವನ್ನು ನಾಲ್ಕನೆಯ ಖಂಡದಲ್ಲಿ ಸಾರಲಾಗಿದೆ. ಇಂತು ನಾಲ್ಕು ಖಂಡಗಳಿಂದ ಕೂಡಿದ ಕೇನೋಪನಿಷತ್ತಿನಲ್ಲಿ, ಅಗ್ನಿ, ವಾಯು, ಇಂದ್ರಾದಿ ದೇವತೆಗಳು ಬ್ರಹ್ಮದಿಂದ ಚೈತನ್ಯ ಪಡೆದಿದ್ದರೂ ಅವರಿಗೆ ಬ್ರಹ್ಮದ ನೆಲೆಯರಿಯದೆ, ಅದನ್ನು ತಿಳಿಸಿದ್ದು ಶೋಭಾಯಮಾನಳಾದ ಉಮಾ ಹೈಮವತೀ ಎಂಬುದರಿಂದ ಇಲ್ಲಿ ಶಿವಶಕ್ತಿಯ ಮಹಿಮೆ ಹೇಳಲಾಗಿದೆ. ಇಂತಹ ಅಮೂಲ್ಯ ಜ್ಞಾನದ ಆಗರವಾದ ಕೇನೋಪನಿಷತ್ತಿನ ಮಂತ್ರಗಳನ್ನು ಈ ಕೆಳಗೆ ಕನ್ನಡದಲ್ಲಿ ಕಾವ್ಯರೂಪದಲ್ಲಿ ಅನುವಾದಿಸಿ ಕೊಡಲಾಗಿದೆ. ]

### ಶಾಂತಿಮಂತ್ರ

ಓಂ ಪೊರೆಯಲೆರೆಯು ನಮ್ಮಿರ್ವರಂ ಕೂಡಿ
ಅನುಭವಿಸುವಂ ಕೂಡಿ ಸಾಹಸವ ಮಾಡಿ
ತೇಜಸ್ವಿಯಿರಲಿ ನಮ್ಮುಭಯರಧ್ಯಯನ
ಎಂದೆಂದು ದ್ವೇಷಿಸದೆ ನಾವು ಬಾಳೋಣ.
ಶಾಂತಿಯೈ ಶಾಂತಿಯೈ ಶಾಂತಿಯೈ

ಓಂ ಪುಷ್ಟಿಗೊಳ್ಳಲಿ ಮಮಾಂಗಗಳು ವಾಕ್‌ಪ್ರಾಣದೃಕ್
ಶ್ರೋತ್ರಗಳು ಬಲವು ಸರ್ವೇಂದ್ರಿಯಗಳು
ಸರ್ವವಿದು ಬ್ರಹ್ಮಮುಪನಿಷದುಕ್ತಮಾ ಬ್ರಹ್ಮ
ಮಂ ನಿರಾಕರಿಸದಿರಲೆನ್ನ ಬಾಳು

ಬ್ರಹ್ಮವೆನ್ನಂ ನಿರಾಕರಿಸದಿರಲಿ
ಅನಿರಾಕರಣಮಿರಲಿ ಎನಗದುಮೆಯಿರಲಿ
ಉಪನಿಷತ್ತುಪದಿಷ್ಟವಾದ ಧರ್ಮಂಗಳ್
ಆತ್ಮನಿರತನಾದೆನ್ನೊಳಿರಲಿ !
ಅವುಯೆನ್ನೊಳಿರಲಿ
ಓಂ ಶಾಂತಿಯೈ ಶಾಂತಿಯೈ ಶಾಂತಿಯೈ

## 1

ಆವನಿಷ್ಟದಿ ಪ್ರೇರಿತಂ ಮನವು ಹರಿವುದಿದು ?
ಪ್ರಥಮ ಪ್ರಾಣವು ಕಾರ್ಯವೆಸಗುತಿಹುದು ?
ಆವನಿಷ್ಟದಿ ಮಾತನಿದನಾಡುವರು ಮೇಣು
ಕಣ್ಣು ಕಿವಿಗಳನಾವ ದೇವ ಪ್ರೇರಿಪನು ? ೧

ಕಿವಿಗೆ ಕಿವಿ ಮನಕೆ ಮನ ಮಾತಿಂಗೆ ಮಾತೆಂದು
ಪ್ರಾಣಕ್ಕೆ ಪ್ರಾಣ ಕಣ್ಣದೆ ಕಣ್ಣದೆಂದು
ಇಂತು ತಿಳಿದೆಲ್ಲವನ್ನುಳಿದತ್ತ ಪೋದವರ್
ಈ ಲೋಕವಂ ದಾಂಟಮೃತರಾದರ್.

ಅದುವರೆಗೆ ದೃಷ್ಟಿಹೋಗುವುದಿಲ್ಲವದುವರೆಗೆ
ಮಾತು ಮುಟ್ಟುವುದಿಲ್ಲ ಮನ ಹರಿವುದಿಲ್ಲ,
ನಾವಿದನು ತಿಳಿಯಲೊಲ್ಲೆವು ಮೇಣಿದನು ಹೇಗೆ
ತಿಳಿಸಬೇಕೆಂದೆಮಗೆ ತಿಳಿಯಲೊಲ್ಲ. ೩

ತಿಳುವಳಿಕೆಗೊಳಗಪ್ಪ ವಿಷಯಕಿಂತದು ಬೇರೆ;
ತಿಳುವಳಿಕೆಗೊಳಗಾಗದದಕು ಬೇರೆ,
ಇಂತೆಂದು ಕೇಳಿದೆವು ನಾವದನು ಹಿರಿಯರಿಂ
ಎಮಗೆ ವಿವರಿಸಿದ ಪೂರ್ವಾಚಾರ್ಯರಿಂ

ಮಾತಿನಿಂದಾವುದವ್ಯಕ್ತಮಪ್ಪುದು, ಮಾತು
ಆವೊಂದರಿಂ ವ್ಯಕ್ತಮಾಗುತಿಹುದು,
ನೀನದನೆ ಬ್ರಹ್ಮವೆಂದರಿವುದಾವುದಿದೆಂದು
ಪೂಜಿಪರದಲ್ಲವೈ - ತಿಳಿದಿರುವುದು ೫

ಮನಸಿನಿಂದಾವುದಂ ಮನನ ಮಾಡುವುದರಿದು
ಆವೊಂದರಿಂ ಮನವು ನೆನೆಯುತಿಹುದು,
ನೀನದನೆ ಬ್ರಹ್ಮವೆಂದರಿವುದಾವುದಿದೆಂದು
ಪೂಜಿಪರದಲ್ಲವೈ ತಿಳಿದಿರುವುದು

ಕಣ್ಣಿಂದಲಾವುದಂ ಕಾಂಬುದಿಲ್ಲವು, ಕಣ್ಗಳ್
ಆವೊಂದರಿಂ ನಿಜದಿ ಕಾಣುತಿಹವು;
ನೀನದನೆ ಬ್ರಹ್ಮವೆಂದರಿವುದಾವುದಿದೆಂದು
ಪೂಜಿಪರದಲ್ಲವೈ ತಿಳಿದಿರುವುದು ೭

ಕಿವಿಯಿಂದಲಾವುದನ್ನಾಗದಿದ ಕೇಳುವುದು,
ಆವೊಂದರಿಂ ಕಿವಿಯು ಕೇಳುತಿಹುದು;
ನೀನದನೆ ಬ್ರಹ್ಮವೆಂದರಿವುದಾವುದಿದೆಂದು
ಪೂಜಿಪರದಲ್ಲವೈ ತಿಳಿದಿರುವುದು.

ಪ್ರಾಣದಿಂ ಪ್ರಾಣಗೊಳ್ಳುವುದಿಲ್ಲವಾವುದಿದು,
ಆವೊಂದರಿಂ ಪ್ರಾಣ ಪ್ರಾಣಿಸುವುದು.
ನೀನದನೆ ಬ್ರಹ್ಮವೆಂದರಿವುದಾವುದಿದೆಂದು
ಪೂಜಿಪರದಲ್ಲವೈ ತಿಳಿದಿರುವುದು. ೯

## 2

ನಾ ತಿಳಿವೆ ಬ್ರಹ್ಮರೂಪವ ದೇವತೆಗಳೊಳವ
ನಿರವನೆಂಬೀ ನಿನ್ನ ಗ್ರಹಿಕೆಯಲ್ಪಂ;
ಅದನು ಯೋಚಿಸತಕ್ಕುದೆನಲಂದು, ಗುರುದೇವ !
ಅರಿವಾಯಿತೆನಗೆಂದನಾಗ ಶಿಷ್ಯಂ. ೧

ನಾ ತಿಳಿವೆನೆಂಬೆಣಿಕೆಯಿಲ್ಲ ತಿಳಿದಿಲ್ಲವೆಂ
ಬೆಣಿಕೆ ಸಹ ಸಲ್ಲ ತಿಳಿದಿರುವೆನಲ್ಲ
ಅರಿವಿಲ್ಲವೆಂದೆಣಿಸಲಿಲ್ಲ ನಾನರಿವೆನೆಂ
ಬರಿವುಳ್ಳವನೆಯುದನು ಬಲ್ಲನೆಲ್ಲ. ೨

ತಿಳಿದಿಲ್ಲವೆಂದಾತ ತಿಳಿದವಂ ಮೇಣಂತೆ
ತಿಳಿದೆನೆಂಬವನೆ ತಾಂ ತಿಳಿಯದಾತಂ.
ಅರಿವುಳ್ಳವರ್ಗರಿಯದೆಂಬುದಿದು ನಿಜವಲ್ತೆ
ಅರಿಯದರ್ಗರಿತಿಹುದು ಪರಮತತ್ವಂ ೩

ಪ್ರತಿಬೋಧದಿಂ ವಿದಿತವಾದ ತಿಳಿವಿಂ ತಾನು
ಅಮೃತತ್ವಮಂ ಬಿಡದೆ ಪಡೆಯುತಿಹನು
ಆತ್ಮವಿದ್ಯಾಬಲದಿ ಪಡೆಯುವನು ವೀರ್ಯವನು
ವಿದ್ಯೆಯಿಂದಲಿ ಪಡೆವನಮೃತವನ್ನು ೪

ಇಲ್ಲಿ ತಿಳಿದವಗೆ ಹೊಳೆವುದು ಸತ್ಯ, ತಿಳಿಯದವ
ಗಿಲ್ಲಿ ದೊರೆವುದು ನಿತ್ಯ ನಷ್ಟ ತಾಂಬ:
ಜೀವಿಜೀವಿಗಳೊಳಿದನರಿತ ಧೀರರ್ಪೋಗು
ತೀ ಲೋಕದಿಂ ಪಡೆವರಮೃತಕುಂಭ!

## 3

ದೇವರ್ಕಳಿಂಗೆ ಬ್ರಹ್ಮಂ ಜಯಿಸಿತಾ ಬ್ರಹ್ಮ
ಜಯದಿ ದೇವರ್ಮಹಿಮರಾದರ್,
ಈ ಜಯವು ನಮ್ಮದೀ ಮಹಿಮೆ ನಮ್ಮದಿದೆಂದು
ಯೋಚನೆಯನವರು ಗೈದರ್. ೧

ಅವರ ನೆಲೆಯನು ತಿಳಿಯಿತದು ಮತ್ತೆ ಕಾಣಿಸಿತು
ಅವರಿಂಗೆ ಸತ್ಯದೊಂದಿರವಂ:
ಯಕ್ಷವಿದು ಪ್ರತ್ಯಕ್ಷವಾದುದೆಂಬುದನಂತು
ಅರಿಯಲಿಲ್ಲವರದರ ನಿಜವಂ ೨

ಅವರಗ್ನಿಯಂ ಕುರಿತು ಪೇಳ್ದರೀ ತೆರದಲ್ಲಿ,
ಹೇ ಜಾತವೇದ ನೀನರಿವುದಿದನು,
ಈ ಯಕ್ಷವಾವುದೆಂಬುದನೆಂದೆನಲ್ಕಗ್ನಿ
ನುಡಿದನು ತಥಾಸ್ತು ಎಂಬುದನು ೩

ಅಗ್ನಿಯೋಡಿದನು ಯಕ್ಷನ ಬಳಿಗೆ, ಪ್ರಶ್ನಿಸಿತು
ಯಕ್ಷ ನೀನಾರೆನ್ನುತವನ ಕೂಡೆ,
ನಾನಗ್ನಿಯಾಗಿಯೆಂ ನಾಂ ಜಾತವೇದನೆಂ
ಎಂದು ಪೇಳ್ದನು ಯಕ್ಷನೊಡನೆ ೪

ಅಂತಪ್ಪ ನಿನ್ನೊಳಿನ್ನೆಂತಪ್ಪ ವೀರ್ಯವಿದೆ
ಪೇಳೆಂದು ಯಕ್ಷ ಪ್ರಶ್ನಿಸಿತು,
ದಹಿಸುವೆಂ ಸರ್ವವಂ ಧರಣಿಯೊಳಗಿರ್ಪುದಂ
ಇಂತಗ್ನಿಯದಕುತ್ತರಿಸಿತು ೫

ಇದನು ನೀ ದಹಿಸೆಂದಿಡಲು ಹುಲ್ಲ ಕಡ್ಡಿಯನು
ಎಲ್ಲ ಬಲದಿಂ ಸುಡದೆ ಹೋಗೆ,
ಹಿಂಚಿ ಹೇಳಿದನಗ್ನಿ; ಯಾವುದೀ ಯಕ್ಷನಿದ
ನರಿಯಲಸದಳವಾಯಿತೆನಗೆ ೬

ವಾಯುವಂ ಕುರಿತವರು ಪೇಳ್ದರೀ ರೀತಿಯಲಿ
ಹೇ ವಾಯೊ! ನೀ ತಿಳಿವುದಿದನು,
ಈ ಯಕ್ಷವಾವುದೆಂಬುದನೆಂದೆನಲ್ವಾಯು
ನುಡಿದನು; ತಥಾಸ್ತು ಎಂಬುದನು ೭

ವಾಯುವೋಡಿದನು ಯಕ್ಷನ ಬಳಿಗೆ, ಪ್ರಶ್ನಿಸಿತು
ಯಕ್ಷ ನೀನಾರೆನ್ನುತವನ ಕೂಡೆ,
ನಾ ವಾಯುವಾಗಿಹೆಂ, ನಾ ಮಾತರಿಶ್ವನೆಂ
ಎಂದು ಪೇಳ್ದಂ ಯಕ್ಷನೊಡನೆ ೮

ಅಂತಪ್ಪ ನಿನ್ನೊಳಿನ್ನೆಂತಪ್ಪ ವೀರ್ಯವಿದೆ
ಪೇಳೆಂದು ಯಕ್ಷ ಪ್ರಶ್ನಿಸಿತು.
ಎತ್ತುತಿಹೆನೆಲ್ಲವಂ ಪೃಥ್ವಿಯೊಳಗಿರ್ಪುದಂ
ವಾಯು ಬಳಿಕಿಂತುತ್ತರಿಸಿತು ೯

ಇದನು ನೀ ಹಾರಿಸೆಂದಿಡೆ ಹುಲ್ಲ ಕಡ್ಡಿಯನು
ಎಲ್ಲ ಬಲದಿಂದೆತ್ತಲೊಲ್ಲದಾಗೆ
ಹಿಂಚಿ ಪೇಳ್ದಂ ವಾಯು ಯಾವುದೀ ಯಕ್ಷವಿದ
ನರಿಯಲಸದಳವಾಯಿತೆನಗೆ ೧೦

ಬಳಿಕಿಂದ್ರನಂ ಕರೆದು ಪೇಳಿದರು, ಹೇ ಮಘವ,
ಆವುದೀಯಕ್ಷವೆಂಬುದನರಿವುದು,
ಅಂತಾಗಲೆಂದು ವೋಡಿದನಿಂದ್ರ, ಬಳಿಗದರ
ಮರೆಯಾಗುತವನಿಂದ ಪೋದುದಂದು ೧೧

ಆಗಲವನಾಗಸದೊಳಿಹ ಶೋಭಮಾನಳಹ
ಹೈಮವತಿಯಾದುಮೆಯ ಬಳಿಗೆ
ಬಂದು, ಹೇಳಿದನವಳೊಡನೆ; ದೇವಿ, ಯಾವುದೀ
ಯಕ್ಷವೆಂಬುದನು ತಿಳಿಸೆನಗೆ ೧೨

4

ಅವಳೆಂದಳದು ಬ್ರಹ್ಮವೆಂದು, ಬ್ರಹ್ಮದ ಜಯದಿ
ಮಹಿಮೆಯಂ ನೀವಿಂತು ತಾಳ್ದಿರೆಂದು;
ಅದರಿಂದಲಿಂದ್ರನರಿತಂ ಬ್ರಹ್ಮವಂ ನಿಜದಿ
ಉಮೆಯಿತ್ತವುಪದೇಶ ಮನಕೆ ತಂದು ೧

ಇಂದ್ರಾಗ್ನಿವಾಯುವೆಂಬವರಿದನು ಬಳಿಯಿಂದ
ಮುಟ್ಟಿದರು ತಿಳಿದುಕೊಂಡಿಹರು;
ಇದು ಬ್ರಹ್ಮವೆಂದು ಮೊದಲದರಿನೀ ದೇವರ್ಕ
ಳಿತರರಂ ಮೀರಿ ನಿಂದಿಹರು ೨

ಅದರಿಂದಲಿಂದ್ರ ಮೀರಿದನನ್ಯದೇವರನು
ಇದನು ಬಳಿಯಿಂದ ಮುಟ್ಟಿದನು;
ಬ್ರಹ್ಮವೆಂದಿದನು ಬಲ್ಲವರಲ್ಲಿ ಮೊದಲಿಗನು
ಇತರರಿಂ ಮಿಗಿಲ್ದ ಗಟ್ಟಿಗನು, ೩

ಮಿಂಚು ಹೊಳೆದಂತೆ ಮೇಣ್ ಕಣ್ ಮುಚ್ಚಿ ತೆರೆದಂತೆ
ಕಂಡು ಕಾಣದೆ ಮಾಯವಪ್ಪುದಲ್ತೆ
ಇದು ಬ್ರಹ್ಮವಿಷಯದಾದೇಶವಾಗಿದೆ ಮತ್ತೆ
ಇದು ದೇವತಾ ವಿಷಯವೆಂಬರಲ್ತೆ ೪

ಮನವು ಬ್ರಹ್ಮದ ಸಮೀಪಕೆ ಜವದಿ ಪೋಪಂತೆ
ಮನಸಿಂದಲಿದನು ಸಂಸ್ಮರಿಸಿದಂತೆ
ಬ್ರಹ್ಮ ವಿಷಯದಲಿ ಮನ ಸಂಕಲ್ಪಗೈದಂತೆ
ಇರುವುದಧ್ಯಾತ್ಮವೆಂದೆಂಬರಲ್ತೆ ೫

ಅದಕೆ ತದ್ವನವೆಂಬ ಪೆಸರದಂ ತದ್ವನವ
ದೆಂದುಪಾಸಿಸಬೇಕು, ಭಜಿಸಬೇಕು
ಆವನಿದನಿಂತೆಂದು ತಿಳಿವನವನಂ ಹೊಂದು
ವವು ಸರ್ವಜೀವಿಗಳಿದರಿಯೆ ಸಾಕು ೬

ಪೇಳುವುದು ಗುರುವೆ ಎನಗುಪನಿಷತ್ತನ್ನೆಂದ
ಶಿಷ್ಯಂಗೆ ಗುರು ನುಡಿದನಿಂತು;
ಉಪನಿಷತ್ತುಪದೇಶವಾಯ್ತು, ನಿನಗಿದೊ ಬ್ರಹ್ಮ
ವಿಷಯವಾದುಪನಿಷತ್ ಪೇಳ್ದುದಾಯ್ತು. ೭

ಬ್ರಹ್ಮ ವಿದ್ಯೆಯನರಿಯಲಿವು ಪ್ರತಿಷ್ಠೆಗಳಹವು
ತಪವು ದಮಕರ್ಮವೆನ್ನುವುದು
ವೇದಗಳು ವೇದಾಂಗಗಳು ಸತ್ಯವೆಂಬವಿವು
ಆಯತನವದಕೆ ತಿಳಿಯುವುದು. ೮

ಆವನಿದನಿಂತೆಂದು ಬಲ್ಲನೆಲ್ಲವ ಭವದಿ
ಪಾಪಗಳ ಕಳೆದುಕೊಂಡಿಹನು,
ಅವನನಂತಜ್ಯೇಯ ಸ್ವರ್ಗಲೋಕದಿ ಪ್ರತಿ
ಷ್ಠಿತನು ನಿಜದಿಂ ಪ್ರತಿಷ್ಠಿತನು,
ಓಂ ಶಾಂತಿಯ್ಶೈ ಶಾಂತಿಯ್ಶೈ ಶಾಂತಿಯ್ಶೈ ೯

ಕಯ್ಯಾರ ಕಿಞ್ಞಣ್ಣ ರೈ.

# "…. ಸಂಶಯಾತ್ಮಾ ವಿನಶ್ಯತಿ …."

**ಮಾ**ನವಧರ್ಮದ ಅವಲೋಕನದಲ್ಲಿ ಪಾರಮಾರ್ಥಿಕ ದೃಷ್ಟಿ ಇರುವುದು ಅತ್ಯಾವಶ್ಯಕ. ದೈನಂದಿನ ಜೀವನದ ಪ್ರತಿಕ್ಷಣದಲ್ಲಿ ವಿಚಾರಪ್ರಿಯನೂ ವಿವೇಕಿಯೂ ಆದ ಮನುಷ್ಯನು ನೀತಿನಿಯಮಗಳನ್ನು ಮೀರದೆ ಇರುತ್ತಾನೆ ಎನ್ನುವ ಮಾತು ಅತಿಶಯ ಎಂಬಂತೆ ಕಂಡು ಬರುತ್ತದೆ. ಆದರೆ ಇದರ ಹಿನ್ನಲೆಯಲ್ಲೇ ಧಾರ್ಮಿಕ ಮನೋವೃತ್ತಿ ಬೆಳೆದು ಬಂದು ದೈವಿಕ ಪ್ರತಿಪಾದನೆಯ ತಳಹದಿ ಭದ್ರವಾದಾಗ ಜೀವನದ ರೂಪರೇಷೆಗಳು ವಿಶಿಷ್ಟವಾಗಿಯೂ ಸುಲಭವಾಗಿಯೂ ಸಾಗುತ್ತವೆ ಎನ್ನುವುದು ಒಪ್ಪಿಕೊಳ್ಳಬಹುದಾದ ಅಂಶವಾಗಿದೆ. ಉತ್ಕರ್ಷವನ್ನು ಬಯಸುವವನು ಸಮಾಜಜೀವಿಯಾಗಿ ಬಾಳುವನು. ಸಮಾಜದಲ್ಲಿ ಯಾವತ್ತೂ ನೀತಿ ಸಂಹಿತೆಗಳು ಇರುತ್ತವೆ. ಇವು ಇಲ್ಲದೆ ಮಾನವನ ಬದುಕು ಬದುಕೆನಿಸಲಾರದು. ಆದುದರಿಂದಲೇ ಸಮಾಜಧರ್ಮವೆನ್ನುವುದು ಶ್ರೇಷ್ಠವಾದುದು. **ಎಚ್. ಸ್ಪೆನ್ಸರ್** ಹೇಳಿದಂತೆ 'ಧರ್ಮವು ಆದರ್ಶ ಸಮಾಜದಲ್ಲಿರುವ ಆದರ್ಶ ಮನುಷ್ಯನ ಆದರ್ಶ ವರ್ತನಾ ಸಂಹಿತೆ.' ಇಂತಹ ಧರ್ಮವು ಯೋಗ್ಯ ಕಾರ್ಯದಲ್ಲಿ ಮನುಷ್ಯನನ್ನು ಚೋದಿಸುತ್ತದೆ. ಯೋಗದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಮಾಡಿಸುತ್ತದೆ. ಅದು ಆಚಾರದ ಸ್ವರೂಪ ಉಳ್ಳದ್ದು. ಇಷ್ಟವನ್ನು ಪಡೆಯಲು ಮತ್ತು ಅನಿಷ್ಟವನ್ನು ಪರಿಹರಿಸಿಕೊಳ್ಳಲು ಧರ್ಮ ಒಂದು ಅಲೌಕಿಕೋಪಾಯ. ನೀತಿಯು ಧರ್ಮದ ಉಸಿರಾದರೆ, ಅತಿಭೌತತತ್ವಜ್ಞಾನವು ಅದರ ಶ್ವಾಸಕೋಶ. ಮಾನವನ ನಾಗರಿಕತೆಯಲ್ಲಿ ಧರ್ಮವು ವಿರುದ್ಧವಾದ ಸಮನ್ವಯವನ್ನು ಮಾಡುತ್ತದೆ. "ಕರ್ಮಕಾಂಡ, ಮತಪದ್ಧತಿ, ಶ್ರದ್ಧಾಮಯ ಪೂಜೆ–ಪುರಸ್ಕಾರ ಪುರುಷಸ್ವರೂಪದ ದೇವರಂಥ ಅತಿಮಾನುಷಶಕ್ತಿಯನ್ನು ಮನ್ನಿಸುವುದು ಮತ್ತು ಅಂತಹ ಮನ್ನಣೆಯಿಂದ ಮನುಷ್ಯನ ನಡತೆ ಹಾಗೂ ಮನಃ ಪ್ರವೃತ್ತಿಗಳು ರೂಪಿಸಲ್ಪಡುವುದು" ಮೊದಲಾದುವೆಲ್ಲವೂ ಧರ್ಮದ ವಿಶ್ಲೇಷಣೆಯಲ್ಲಿ ಬರುತ್ತವೆ. ಅನಾದಿ ಕಾಲದಿಂದಲೂ ಬಂದ ಈ ನಂಬಿಕೆಗಳು ಮಾನವನನ್ನು ಸುಖದ ಪಥದಲ್ಲಿ ಸಾಗಿಸಿವೆ. ಎಂಬುದಕ್ಕೆ ಪ್ರತ್ಯಕ್ಷ ಪುರಾವೆಗಳು ಬೇಕಾದಷ್ಟಿವೆ.

**" ದೇವರ ಭಯವೇ ಜ್ಞಾನದ ಮೂಲ "** ಎಂಬ ಮಾತು ಇಂದಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿದಾಗ ಇದರ ಔಚಿತ್ಯದ ಹಿನ್ನಲೆ ವಿವೇಚಿಸಬೇಕಾದುದಾಗಿದೆ. ಧರ್ಮದ ಕುರಿತು ವ್ಯಾಖ್ಯಾನಿಸಿದ ಋಷಿಮುನಿಗಳು ದೈವತ್ವದ ಗತಿಬಿಂಬಗಳನ್ನು ಸ್ಪಷ್ಟೀಕರಿಸಿದ್ದಾರೆ. ಅತಿಮಾನುಷವಾದ, ಮಾನವನ ಬುದ್ಧಿಶಕ್ತಿಗೆ ನಿಲುಕದ ಆರನೆಯ ಇಂದ್ರಿಯಕ್ಕೆ ವೇದ್ಯವಾಗುವ ವಸ್ತುವಿಗೆ ಅಥವಾ ಶಕ್ತಿಗೆ ಅಥವಾ ಬೆಳಕಿಗೆ ದೇವರೆಂಬ ಅಭಿಧಾನವೆಂದು ವ್ಯಾಖ್ಯಾನಿಸಬಹುದು. ಜ್ಞಾನಿಗಳ ಅಭಿಪ್ರಾಯದಂತೆ ದೇವರೆಂದರೆ ನಿರ್ಗುಣನೂ, ನಿರಾಕಾರನೂ, ಸರ್ವಶಕ್ತನೂ, ಸರ್ವವ್ಯಾಪಿಯೂ ಆಗಿದ್ದಾನೆ. ಸತ್ಯ, ಧರ್ಮ, ನ್ಯಾಯ, ನೀತಿ, ಸದ್ಗುಣಗಳ ಪ್ರತೀಕನಾಗಿ ಇವುಗಳನ್ನು ಅನುಸರಿಸುವ ಭಕ್ತಜನಸಮುದಾಯಕ್ಕೆ ಶ್ರೇಷ್ಠತ್ವವನ್ನು ದಯಪಾಲಿಸುತ್ತಾನೆ ಎಂಬ ನಂಬಿಕೆ ಹಿಂದಿನಿಂದಲೂ ಬೆಳೆದು ಬಂದುದಾಗಿದೆ. ದೇವರ ಅಸ್ತಿತ್ವ ಈ ಹಿನ್ನೆಲೆಯಲ್ಲಿ ಅವಶ್ಯವೂ ಆದರಣೀಯವೂ ಆಗಿದೆ. ಧರ್ಮಬಾಹಿರವಾದ ಯಾವುದೇ ಕರ್ಮಗಳು ದೈವದ್ರೋಹವೆಂದು ಸಮಾಜಕಂಟಕವೆಂದು ಪರಿಗಣಿಸಿ ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಕಠಿಣವೆಂದು ಮೋಕ್ಷಕ್ಕೆ ಅಸಾಧ್ಯವೆಂದು ಜನಮನದಲ್ಲಿ ಬೇರೂರಿರುವುದರಿಂದಲೇ ಹಿಂದಿನ ಜನರಲ್ಲಿ ಭಯ, ಭಕ್ತಿ, ಶ್ರದ್ಧಾನಿಯಮಗಳು ಪರಿಪಾಲಿಸಲ್ಪಟ್ಟಿದ್ದು ಸರ್ವವಿದಿತ. ಹೀಗೆ ವ್ಯವಸ್ಥಿತವಾದ ಬಾಳುವೆಯನ್ನು ಸಾಗಿಸಲು ಹಿಂದಿನಕಾಲದ ಮಹನೀಯರು ಪಾರಮಾರ್ಥಿಕತೆಯನ್ನು ಗಮನದಲ್ಲಿಟ್ಟುಕೊಂಡು ಶಾಸ್ತ್ರಾದಿ ಗ್ರಂಥಗಳನ್ನು. ಸ್ಮೃತಿಗಳನ್ನು, ಪುರಾಣಗಳನ್ನು ರಚಿಸಿದರು.

ಬಾಳುವೆಯ ಸದುದ್ದೇಶ ಮತ್ತು ಆತ್ಮೋದ್ಧಾರಗಳೇ ಆ ಕಾಲದ ಮೌಲ್ಯಗಳಾಗಿದ್ದುವು.

ಹಿಂದೂ ಸಂಸ್ಕೃತಿ ವಿಶ್ವವ್ಯಾಪಿಯಾದುದು. ನಾವು ನಂಬಿರುವ ವೇದಪುರಾಣಗಳು, ತತ್ವಗಳು ಇತರ ಮತಗಳಿಗೆ ದಾರಿದೀಪವಾದವುಗಳು. ನಮ್ಮ ಪುರಾಣಗಳಲ್ಲಿ ಅಥವಾ ಪವಿತ್ರ ಗ್ರಂಥರಾಶಿಗಳಲ್ಲಿ ಹಲವಾರು ದೇವತೆಗಳ ಹೆಸರುಗಳು ಅವರ ವಿಶಿಷ್ಟವಾದ ಶಕ್ತಿಗಳು ಅದರ ಹಿನ್ನೆಲೆಯಲ್ಲಿ ಅವರ ಆರಾಧನೆಗಳು ಅದರಿಂದಾಗುವ ಒಳಿತು ಕೆಡುಕುಗಳು ಸಾರವತ್ತಾಗಿ ವಿವರಿಸಲ್ಪಟ್ಟಿವೆ. ಮಾನವನ ಜೀವನದಲ್ಲಿ ದೈವತ್ವದ ಅಸ್ತಿತ್ವ ಪ್ರಧಾನವಾಗಿದೆ. ಹೀಗೆ ನಮ್ಮ ಪೂರ್ವಿಕರಿಗೆ ದೇವರನ್ನು ಪೂಜಿಸುವುದು, ಆತನ ಹೆಸರಿನಲ್ಲಿ ದಾನ ಧರ್ಮಾದಿಗಳನ್ನು ಮಾಡುವುದು ಒಂದು ಸಂಪ್ರದಾಯವಾಗಿ ಪುಣ್ಯಕಾರ್ಯವಾಗಿತ್ತು. ಇದರಿಂದಾಗಿ ಎಷ್ಟೋ ಬಡ ಜನರಿಗೆ ಅನ್ನದಾನ ವಸ್ತ್ರದಾನಗಳು ನಡೆದು, ಅವರು ಸೌಹಾರ್ದಯುತವಾದ, ಧರ್ಮಸಮ್ಮತವಾದ ಬಾಳುವೆಯನ್ನು ನಡೆಸಿ, ಕಿಂಕರ್ತವ್ಯಮೂಢರಾಗದೆ ಸತ್ಕರ್ಮ, ಸ್ವಕರ್ಮ ನಿರತರಾಗಿದ್ದರು. ಚತುರ್ವರ್ಣದವರು ನಿಯಮಾವಳಿಗಳನ್ನು ಪಾಲಿಸಿ ಒಂದು ವ್ಯವಸ್ಥಿತವಾದ ಸಾಮಾಜಿಕ ಜೀವನವನ್ನು ಸಾಗಿಸುತ್ತಿದ್ದರು. ಆಸ್ತಿಕ ಮಹಾಶಯರು ಪುರಾಣಶಾಸ್ತ್ರಾದಿ ಗ್ರಂಥಗಳ ಪ್ರತಿಗಳನ್ನು ಮಾಡಿ ಧರ್ಮಪ್ರಚಾರಕ್ಕಾಗಿ ವಿತರಿಸುತ್ತಿದ್ದರು. ಹೀಗೆ ಒಂದು ರೀತಿಯ ಧಾರ್ಮಿಕವಾದ ಜೀವನ, ಮಾನಸಿಕ ಶಾಂತಿಯನ್ನು ಜನರಿಗೆ ನೀಡುತ್ತಿತ್ತು.

ಮೂರ್ತಿಪೂಜೆ ಆರಾಧಕರಿಗೆ ನೆಮ್ಮದಿಯ ತಾಣವಾಗಿತ್ತು. ಋಷಿಮುನಿಗಳು ಘೋರ ಅಡವಿಯಲ್ಲಿ ಪ್ರಶಾಂತವಾತಾವರಣದಲ್ಲಿ ತಪಸ್ಸನ್ನು ಮಾಡಿ ಭಗವಂತನ ಅಸ್ತಿತ್ವವನ್ನು ತಿಳಿದುಕೊಳ್ಳುತ್ತಿದ್ದರು. ಇಂದ್ರಿಯನಿಗ್ರಹ ಮತ್ತು ಸಹನೆ ತಪಸ್ಸಿಗೆ ಪ್ರಧಾನವಾದುದು. ಸಾಮಾನ್ಯ ಜನರಿಗೆ ಇದು ನಿಲುಕದ ವಿಷಯವಾಗಿದೆ. ಆದರೂ ದೈವಭಕ್ತಿಯನ್ನು ಬಿಡಲೊಲ್ಲದ ಜನರಿಗೆ ಆರಾಧಿಸುವುದಕ್ಕೆ ದೇವರ ಆವಾಸಸ್ಥಾನ ಅವಶ್ಯವಾಗಿ ಕಂಡುಬಂತು. ಈ ನಿಮಿತ್ತ ಊರಿಗೆ ದೇವಸ್ಥಾನಗಳು ದೈವಿಕ ಶಕ್ತಿಯ ಹಿನ್ನೆಲೆಯಲ್ಲಿ ರೂಪುಗೊಂಡವು. ಪುರಾಣೇತಿಹಾಸಗಳ ಪ್ರಕಾರ ದೇವರು ತನ್ನ ಅಂಶವನ್ನು ಪ್ರತಿನಿಧಿಸಿ, ಭಕ್ತಾದಿಗಳನ್ನು ಪೊರೆಯುವ ಸಲುವಾಗಿ ಮೂರ್ತಿಯಾದಂತೆ ಕಂಡುಬಂದುದರಿಂದ ಅವು ಪವಿತ್ರಕ್ಷೇತ್ರಗಳೆಂದು ಪರಿಗಣಿಸಲ್ಪಟ್ಟವು. ಇಂತಹ ಕ್ಷೇತ್ರಗಳು ಭಕ್ತಾದಿಗಳು ಆಗಮಿಸಿ, ಇಷ್ಟಾರ್ಥಗಳನ್ನು ಪಡೆಯುವ ಹಾಗೂ ನ್ಯಾಯದಾನವನ್ನು ಪಡೆಯುವ ಕೇಂದ್ರಗಳಾಗಿದ್ದವು. ಯಾವುದೇ ರೀತಿಯ ಸಂಶಯವಾಗಲಿ ಬಂದರೆ ಅದನ್ನು ದೇವಸ್ಥಾನದ ಮೂಲಕ ನಿವಾರಣೆ ಮಾಡುತ್ತಿದ್ದರು. ಜಾತಿಯೊಳಗಿನ ಕಟ್ಟುನಿಟ್ಟುಗಳಾಗಲಿ, ಮನಸ್ಸಿನಲ್ಲಿ ಕೊರೆಯುವ ಸಂಶಯಗಳಾಗಲಿ ಸಮಾಜದಲ್ಲಿ ತೋರುವ ಸಮಸ್ಯೆಗಳಾಗಲಿ, ದೇವರ ಸನ್ನಿಧಿಯಲ್ಲಿ ಹತ್ತು ಸಮಸ್ತರು ಕೈಗೊಂಡ ತೀರ್ಪು ಧರ್ಮಸಮ್ಮತವಾಗಿ ಒಪ್ಪಿಕೊಂಡ ಜನರು ಶಾಂತಿಯುತವಾದ ಜೀವನವನ್ನು ಸಾಗಿಸುತ್ತಿದ್ದರು. ಅಂದಿನ ಕಾಲದಲ್ಲಿ ನಡೆಯುವ ಈ ರೀತಿಯ ವ್ಯವಹಾರದಿಂದ, ಜನರಲ್ಲಿ ಸುವ್ಯವಸ್ಥಿತವಾದ ತಿಳುವಳಿಕೆಯ ದೆಸೆಯಿಂದ ಐಕ್ಯತೆಇತ್ತು. ಆದುದರಿಂದ ದೇವಸ್ಥಾನಗಳಿಗೆ ಭಕ್ತಕೋಟಿಯ ಕಾಣಿಕೆ ಉಂಬಳಿ ರೂಪದಲ್ಲಿ, ಧನಧಾನ್ಯಗಳ ರೂಪದಲ್ಲಿ, ಸೇವಾ ಮನೋಭಾವದಿಂದ ಕೊಡುಗೆಯಾಗಿರುವುದನ್ನು ಶಾಸನಗಳಿಂದ ತಿಳಿದುಕೊಳ್ಳಬಹುದು. ಜೀವನದ ಜಂಜಾಟದಿಂದ ಬೆಂದು ಬಸವಳಿದ ಜನರಿಗೆ ದೇವಸ್ಥಾನವು ನೆಮ್ಮದಿಯ ಬೀಡಾಗಿತ್ತು. ಅನಾರೋಗ್ಯದಿಂದ ನರಳುವವರಿಗೆ ಆರೋಗ್ಯಧಾಮವಾಗಿತ್ತು. ನಿರಾಶ್ರಿತರಿಗೆ ಆಶ್ರಿತ ಆಲಯವಾಗಿತ್ತು. ಕರ್ಮಕಕ್ಷೆಯಲ್ಲಿ ಬಾಡಿದವರಿಗೆ ಧರ್ಮ ರಕ್ಷೆಯಾಗಿತ್ತು. ಇಂತಹ ನಂಬಿಕೆ ಬಲವತ್ತರವಾಗಿ ಮಾನವನಲ್ಲಿ ಬಿತ್ತರಿಸಲ್ಪಟ್ಟಿದ್ದರಿಂದ **“ಯೋಯತ್ ಶ್ರದ್ಧಾಃ ಸ ಏವ ಸಃ”** ಎಂಬಂತೆ ಆತನು ಎಣಿಸಿದಂತೆ ಮಾನಸಿಕ ನೆಮ್ಮದಿ ದೊರೆಯುತ್ತಿತ್ತು. ‘ಸರ್ವಂ ಪರವಶಂ ದುಃಖಂ, ಸರ್ವಂ ಆತ್ಮವಶಂ ಸುಖಂ’ ಎಂಬ ಮನುವಿನ ಮಾತನ್ನು ಪುಷ್ಟೀಕರಿಸಿದ ಅಂದಿನ ಜನಾಂಗ ನೆಮ್ಮದಿಯ ಜೀವನವನ್ನು ನಡೆಸುತ್ತಿತ್ತು.

ಇಂದು ಅನಾದಿ ಕಾಲದಿಂದಲೂ ನಂಬಿಕೊಂಡು ಬಂದ ದೇವತೆಗಳ ಅಸ್ತಿತ್ವಕ್ಕೆ ವೈಜ್ಞಾನಿಕ ಪ್ರಶ್ನೆಯಿಂದ ಕೊಡಲಿಯೇಟು ಬಿದ್ದಿದೆ. ‘ದೇವರು ಇದ್ದಾನೆಯೇ ? ಇದ್ದರೆ ತೋರಿಸಲಿ’ ಎಂಬ ಪಂಥಾಹ್ವಾನ ಆಸ್ತಿಕರ ಪಾಲಿಗೆ ಇಂದು ನಾಸ್ತಿಕರು ಹಾಕಿದ್ದಾರೆ. ಪೂಜೆ

ಪುರಸ್ಕಾರಗಳು ಬೆಲೆ ಇಲ್ಲದ್ದೆಂಬ ಆರೋಪ ಕೇಳುತ್ತಿದ್ದೇವೆ. ಆರ್ಷೇಯವಾಗಿ ನಂಬಿಕೊಂಡು ಬಂದ ಸಂಪ್ರದಾಯಗಳು ಮೂಢನಂಬಿಕೆಗಳಾಗಿ ಘೋಷಿಸಲ್ಪಟ್ಟಿವೆ. ದೈವಿಕ ಪವಾಡಗಳು ಮಾನವನ ಸೃಷ್ಟಿ ಎಂಬುದನ್ನು ಸಾಬೀತು ಮಾಡಿ ತೋರಿಸಿ ಜನರಿಂದ ದೇವರ ಮೇಲಿರುವ ನಂಬಿಕೆಯನ್ನು ನಾಸ್ತಿಕರು (ವಿಜ್ಞಾನಿಗಳು) ಕುಂಠಿತಗೊಳಿಸಿದ್ದಾರೆ. ಪುರಾಣಾದಿ ಗ್ರಂಥಗಳು ದೇವರನ್ನು ನಂಬುವಂತೆ ಮಾಡುವ ಕುಯುಕ್ತಿಗಳು ಎಂದು ಸಾರುತ್ತಿದ್ದಾರೆ. ಶಾಸ್ತ್ರಾದಿ ಗ್ರಂಥಗಳು ಮಂಕು ಬೂದಿ ಎರಚುವ ಗ್ರಂಥಗಳೆಂದು ವಿಡಂಬಿಸುತ್ತಾರೆ. ದೇವರ ಇರುವಿಕೆ ಕೇವಲ ಸ್ವಕಪೋಲ ಕಲ್ಪಿತ ಎಂದು ವಿಶ್ಲೇಷಿಸಿದ್ದಾರೆ. ಜನಸಾಮಾನ್ಯರಿಂದ ದೈವಿಕ ಮನೋಭಾವ ದೂರವಾಗುವಂತೆ ತಮ್ಮ ಹರಿತವಾದ ಮಾತುಗಳಿಂದ ಪ್ರಯತ್ನಿಸುತ್ತಾರೆ. ನಂಬಿಕೆಗಳು ಕೇವಲ ಮೌಢ್ಯ, ಅವುಗಳನ್ನು ಪವಾಡಗಳೆಂದು ನಂಬುವುದಕ್ಕೆ ಅರ್ಥವಿಲ್ಲವೆಂದೂ ಅಂಥವುಗಳನ್ನು ತಾವು ನಾಡಿ ತೋರಿಸುವುದಾಗಿ ಹೇಳಿ ಹಾಗೆ ತೋರಿಸಿದ ಪ್ರಕರಣಗಳನ್ನು ಪತ್ರಿಕೆಯಲ್ಲಿ ನಾವು ಓದಬಹುದು. ನಾಸ್ತಿಕತೆಯ ಕರಿನೆರಳು ವಿಶಾಲವಾಗಿ ಹಬ್ಬಿ ಮಾನವನು ಇಟ್ಟುಕೊಂಡ ನಂಬಿಕೆಗಳು ಧಾರ್ಮಿಕ ಸಂಪ್ರದಾಯಗಳು ಈ ದೆಸೆಯಲ್ಲಿ ಜನರಿಂದ ತೊಲಗಿ ಹೋಗಿವೆ. ತಾವು ಅನ್ಯಾಯ ಮಾಡಿದರೆ ಅಸತ್ಯವನ್ನು ನುಡಿದರೆ, ಕಳವು ಮೋಸ ಮಾಡಿದರೆ, ದೇವರು ಶಿಕ್ಷಿಸಿ ಪಾಪಕೂಪದಲ್ಲಿ ನರಳಬೇಕೆಂಬ ಹಿಂದಿದ್ದ ಆ ಭಯ ಇಂದು ಜನ ಮನದಿಂದ ತೊಲಗಿರುವುದರಿಂದ ಏನನ್ನೂ ಮಾಡುವುದಕ್ಕೆ ಜನ ಹೇಸುವುದಿಲ್ಲ. ಎಂಬುದು ಇಂದಿನ ಪರಿಸ್ಥಿತಿಯನ್ನು ಅರ್ಥೈಸಿಕೊಂಡವರಿಗೆ ತಿಳಿದ ಕಡುಸತ್ಯ.

ಹಿಂದಿನ ಕಾಲದಲ್ಲಿ ದೇವರ ಭಯ ವ್ಯಾಪಕವಾಗಿ ಪ್ರತಿಯೋರ್ವನಲ್ಲಿಯೂ ಅಂತಸ್ಥವಾದುದರಿಂದ ಕೆಟ್ಟ ಕಾರ್ಯಮಾಡಲು ಹಿಂಜರಿಯುತ್ತಿದ್ದರು. ಇಂದು ದೇವರ ಭಯವಿಲ್ಲ. ಯಾವುದನ್ನು ಮಾಡಿದರೂ ಪಾಪದ ಭೀತಿಯಿಲ್ಲ. ಕೇಳುವ ಅಧಿಕಾರ ವರ್ಗದವರನ್ನು ಕಾಂಚನದ ಪ್ರಭಾವದಿಂದ ಸ್ತಬ್ಧರನ್ನಾಗಿ ಮಾಡಬಹುದಾದುದರಿಂದ ವಂಚನೆ ಸುಲಿಗೆ, ಅನಾಗರಿತೆಯ ಈ ವ್ಯವಹಾರ ಎಲ್ಲೆಲ್ಲೂ ತುಂಬಿತುಳುಕಾಡುತ್ತಿರುವುದನ್ನು ನಾವು ಕಾಣಬಹುದು. ಇಂದು ಶಿಕ್ಷೆಯೆಂಬ ಪದಕ್ಕೆ 'ರಕ್ಷೆ' ಅನ್ನುವ ಅರ್ಥ ಬಂದಿದೆ.

ನಮ್ಮ ನಂಬಿಕೆ ಸಂಸ್ಕೃತಿ ಪರದೇಶದವರಿಗೆ ಬೇಕಾಗಿ ನಮಗೆ ಬೇಡವಾಗಿ, ದೇವರು ದಿಂಡಿಮರು ನಮ್ಮಲ್ಲಿಂದ ತೊಲಗಿರುವುದರಿಂದ ವೀ.ಸೀ. ತಮ್ಮ ಕಸ್ಮೈ ದೇವಾಯ ? ಎಂಬ ಕವನದಲ್ಲಿ ಹೇಳಿದಂತೆ ಅವರ ಸ್ಥಾನವನ್ನು ತುಂಬಲು ಬೇರೆ ಯಾರಾದರೂ ಬರಬಹುದೇ ? ಬರುವವರು ಕೋಪಿಗಳೋ ಕರುಣಿಗಳೋ ? ತಿಳಿವಳಿಕೆ ನೀಡುವ ಕೋವಿದರೋ ? ಅವರು ಯಾವ ಶೀಲವನ್ನು ಜಗತ್ತಿಗೆ ನೀಡುತ್ತಾರೆ ? ಅಥವಾ

**"ಇಲ್ಲದಿರೆ ಬೇರಾವ ದೇವರೇ ಬಾರದೇ**
**ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ**
**ಇಲ್ಲದಿರೆ ಮಾನವನ ಸುಗುಣವೇ ದೈವವೋ ?**
**ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ ?"**

ಹೀಗಾಗಿ ನಮ್ಮ ಜನತೆಯು ಇಂದು ಹಳೆ ನಂಬಿಕೆಗಳನ್ನು ಬಿಟ್ಟ ಹೊಸತನ್ನು ಕಾಣದೇ ಸಂಶಯದಲ್ಲಿ ಸಿಲುಕಿ ವಿನಾಶದತ್ತ ಮುಂದುವರಿಯುತ್ತಿದೆ. *

**ಎಸ್. ರಾಮ ಭಟ್.**
**ಕೋಟೆ, ಶಿರಂತಡ್ಕ.**

# ನಿನ್ನ ನೆನಪಿನ ಒರತೆ ಆರದಿರಲಿ

ಓ ಯುಗಾದಿಯ ಒಡೆಯ ನಿನಗೆ ನಮನ
ನಿನ್ನ ಪಾದಕೆ ಕಾಣ್ಕೆ ಎನ್ನ ಕವನ ॥
ಎಂತೆಂಥ ಗಾದಿಗಳು ಉರುಳಿ ಹೋದರು ನಿನಗೆ
ಈ ಯುಗಾದಿಯ ಗಾದಿ ಸ್ಥಿರವಾಗಿದೆ
ಎಂತೆಂಥ ಹಾದಿಗಳು ಹಳಸಿ ಹೋದರು ಮತ್ತೆ
1 ಈ ಯುಗಾದಿಯ ಹಾದಿ ತೆರವಾಗಿದೆ.

ಬೆಳೆ ಕಾಣಿಕೆಯ ತಂದು ಲೆಕ್ಕ ಒಪ್ಪಿಸುವವರೂ
ನಾವು ಸ್ವಾಮಿ ನಿನ್ನ ಒಕ್ಕಲಿಗರು.
ಒಕ್ಕಲು ಮಸೂದೆಯಲಿ ವ್ಯಾಜ್ಯ ಮಾಡೆವು ನಿನ್ನ
2 ತಲೆಯೊಡೆಯೆ ನಾವಲ್ಲ ನಕ್ಸಲಿಗರು.

ಸೂರ್ಯೋದಯದಿ ಮಿಂದು ಹೂ ಹಣ್ಣುಗಳ ತಂದು
ನಿನ್ನ ಪಾದದೊಳಿಟ್ಟು ಮಣಿಯುವವರು
ಹೇಗೆ ಬೇಕೋ ಹಾಗೆ ಎಲ್ಲಿ ಬೇಕೋ ಅಲ್ಲಿ
3 ನಿನ್ನ ಸೂತ್ರಕೆ ಜಗ್ಗಿ ಕುಣಿಯುವವರು.

ಮೈಮೆಗಾರನು ನೀನು ಗೈಮೆಗಾರರು ನಾವು
ಉದಯಾಸ್ತದನಕವೂ ದುಡಿಯುವವರು
ನಿನ್ನ ನೆಲ, ನಿನ್ನ ಹೊಲ, ನಿನ್ನ ಜಲ, ನಿನ್ನ ಬಲ
4 ನಿನ್ನದೆಲ್ಲವೆನುತ್ತ ನುಡಿಯುವವರು.

ನಿನ್ನ ಪಾದಗಳಲ್ಲಿ ಸಾಷ್ಟಾಂಗವೆರಗುವೆವು
ಈ ವರ್ಷದಾ ಗೇಣಿ ತಂದಿರುವೆವು
ಮಳೆಯಿಲ್ಲ ಬೆಳೆ ಕಡಿಮೆ, ರೋಗರುಜಿನದಿ ದುಡಿಮೆ
5 ಬಾಕಿಯಾದರೆ ಮಾಫಿ ಮಾಡೆನುವೆವು

ಆದಾಯ ವೆಚ್ಚಗಳ ತಿಳಿದಂತೆ ಬರೆದಿಹೆವು
ತಿಳಿವುಗಾರನೆ ತಿದ್ದಿ ಒಪ್ಪಿಸಿಕೊಳು
ಎಲೆ ಹೂವು ಫಲ ನೀರು ತಂದು ವಂದಿಸುತಿಹೆವು
6 ಭಕ್ತಿಭಾವದೊಳವನು ಅರ್ಪಿಸಿಕೊಳು

ವರ್ಷ ವರ್ಷದಿ ನಮಗೆ ಬಂಗಾರ ಬೆಳೆ ಬರಲಿ
ದುಃಖ ದಾರಿದ್ರ್ಯಗಳು ದೂರವಿರಲಿ
ಕೆರೆಯ ನೀರನು ಮತ್ತೆ ಕೆರೆಗೆ ಚೆಲ್ಲುವ ಬದುಕು
7 ನಿನ್ನ ನೆನಪಿನ ಒರತೆ ಆರದಿರಲಿ.

ಡಾ। ರಮಾನಂದ ಬನಾರಿ, ಮಂಜೇಶ್ವರ.

# ಶ್ರೀಃ
# ಮಹಾದೇವಮೀಡೇ

ಪುರಾರಾತಿಸೂನುಂ ಪುರಾಣಂ ಪವಿತ್ರಂ
ಪರಂ ಪ್ರೇಯಸಾಂ ಸನ್ನಿಧಾನಂ ಪ್ರಧಾನಂ ।
ಪ್ರಿಯಂ ಪಂಡಿತಾನಾಮಥೋ ಪಾಮರಾಣಾಂ
ಪ್ರಶಸ್ಯಂ ಗಜಾಸ್ಯಂ ಪ್ರಭುಂ ಪ್ರಾತರೀಡೇ ॥ ೧ ॥

ಮುನೀನಾಂ ಮನೋಮಂದಿರಸ್ಥಂ ಮಹೇಶಂ
ಮಹಾಮೋಹಮಂಥಾನಮಂತಃಸ್ಥಮಾದ್ಯಂ ।
ಗಜೇಂದ್ರಾಜಿನಂ ಪಾವನಂ ಸಂವಸಾನಂ
ಉಪರ್ಯರ್ಣಂ ಗಣೇಶಂ ಮಹಾದೇವಮೀಡೇ ॥ ೨ ॥

ಮನೋವಾಗ್ವಿದೂರಂ ಮುರಾರೇರುಪಾಸ್ಯಂ
ಮನೋಜಪ್ರಮಾಥಂ ಮಹೇಂದ್ರೋಪರೋಧಂ ।
ಮನೀಷಿಪ್ರಮಾಣಾತಿಯಾತಂ ಮಹೀನ್ಯೈಃ
ನಮಸ್ಯೋಪಚಾರೈಃ ಸಮಾರಾಧ್ಯಮಾನಂ ॥ ೩ ॥

ಮಖೇಷು ಪ್ರಸನ್ನಂ ಮಖೋತ್ಥೈಃ ಸುಮಂತ್ರೈಃ
ಸುಖಶ್ರೇಯಶೋರಾಕರಂ ಕೀರ್ತನೀಯಂ ।
ಮಖಧ್ವಂಸಕಂ ನಾಕಿವೃಂದೈಕಸೇವ್ಯಂ
ಪ್ರಕೃಷ್ಟಾಟ್ಟಹಾಸಂ ಗರಿಷ್ಠಂ ಗುರೂಣಾಂ ॥ ೪ ॥

ಪ್ರದೋಷೇಽಪ್ಯದೋಷಂ ಹ್ಯಸಂಖ್ಯೇಯದೋಷಂ
ವಿಧಿಶ್ರೀಪತಿಪ್ರೀತಿಸೇವಾತ್ತತೋಷಂ ।
ಸುನಾಟ್ಯಪ್ರಯೋಗೇ ಮಹಾಗಾಯನಾಗ್ರ್ಯೈಃ
ಸತೂರ್ಯಾನುಯಾತಂ ತ್ರಿಣೇತ್ರಂ ವಿಜೈತ್ರಂ ॥ ೫ ॥

ಸ್ವವಾಮೇ ಸವಾಮಂ ಗವೇಂದ್ರಾಧಿರೂಢಂ
ಗಿರೀಶಂ ಗುಹಾವಾಸಿನಂ ನೀಲಕಂಠಂ ।
ಮೃಗವ್ಯಾಧಮೃತ್ಯುಂಜಯಂ ಶೂಲಪಾಣಿಂ
ಗುಣಾಢ್ಯಂ ಗುಣಾತೀತಮಾತ್ಮಾನುಭಾವಂ ॥ ೬ ॥

ವಿಷಾದಂ ವಿಷಾದಚ್ಛಿದಂ ಭೇದಶೂನ್ಯಂ
ದ್ವಿತೀಯಾಶ್ರಿತಾರ್ಧಾಂಗಮೋಂಕಾರಗಮ್ಯಂ ।
ನಿಷಾದಾಧಿಪಂ ಸುಂದರೇಶಂ ನಿರಾಶಂ
ಸದಾಶೀವಿಷಾಲಂಕೃತಂ ವ್ಯೋಮಕೇಶಂ ॥ ೭ ॥

ಸರುದ್ರಾನುವಾಕಾಭಿಷೇಕಾನುರಕ್ತೈಃ
ಬುಧೈರರ್ಚಿತಂ ಷೋಡಶಾರ್ಚಾಪ್ರಸಕ್ತೈಃ ।
ಉದನ್ವತ್ತಟೇ ರಾಮಚಂದ್ರೇಷ್ಟಲಿಂಗಂ
ವಿರಾಮಂ ಶುಚೋ ಭಾರ್ಗವಧ್ಯಾನಸಂಗಂ ॥ ೮ ॥

ಉದಕ್‌ಶಾಬರಕ್ಷೇತ್ರಮಷ್ಟಾದಶಾಂಗ್ಯಾ
ಪ್ರಪದ್ಯೇಹ ಪುತ್ರೈಶ್ಚ ಸೋಪಾನಭಂಗ್ಯಾ ।
ಕಲತ್ರೇಣ ಭಕ್ತಾನವಂತಂ ಮಹಾಂತಂ
ಪ್ರಶಾಂತಂ ಶಿವಂ ಶಾಶ್ವತಂ ಚಾಶುತೋಷಂ ॥ ೯ ॥

ತ್ವದನ್ಯಂ ನ ಮನ್ಯೇ ವದಾನ್ಯಂ ಸುಮಾನ್ಯಂ
ತ್ವದನ್ಯಾ ಗತಿರ್ಮೇ ಸಪಾಪಸ್ಯ ಶೂನ್ಯಾ ।
ಕ್ರಿಯಾ ಮಾಂ ತದಾರ್ತಂ ಮಹಾದೇವ ಧನ್ಯಂ
ನಿವೇಶ್ಯಾತ್ಮಪಾದಾಬ್ಜಕೋಶೇ ಶರಣ್ಯೇ ॥ ೧೦ ॥

ನಮಸ್ತೇ ನಮಸ್ತೇ ಮಹಾದೇವ ಶಂಭೋ
ಕಪರ್ದಿನ್ ದಯಾಸಾಂದ್ರ ಸಚ್ಚಂದ್ರಮೌಳೇ ।
ಪ್ರಸೀದ ಪ್ರಭೋ ನಃ ಕ್ಷಮಸ್ವಾಪರಾಧಾನ್
ಸುತಾನಾಂ ಪಿತಾ ದುರ್ಮತೀನಾಂ ಮಹಾತ್ಮನ್ ॥ ೧೧ ॥

*

ಪ್ರೊ. ಯಂ. ರಾಮಕೃಷ್ಣ ಭಟ್.

# ക്ഷേത്ര സന്നിധിയിൽ

## ശങ്കരൻകുട്ടി, കുത്തിയതോട്

പ്രഹ്ലാദൻ ആവുന്നത്രയും പറഞ്ഞുനോക്കി; പ്രാർത്ഥിച്ചു. പക്ഷേ, ഹിരണ്യന് ക്ഷമകെട്ടു. അയാൾക്ക് കോപത്തേക്കാളേറെ ജിജ്ഞാസയായിരുന്നു. 'എവിടെ നിന്റെ നാരായണൻ?' അയാൾ അലറി. അടുത്തുകണ്ട അയസ്തംഭത്തിൽ വാൾത്തലകൊണ്ട് ആഞ്ഞുവെട്ടി. അമ്പോ, എന്തൊരു കരുത്ത്! ഇരുമ്പുതൂണ് പൊടിഞ്ഞുപോയി. എങ്കിലും ഹിരണ്യന്റെ ജിജ്ഞാസ ശമിച്ചു; മോക്ഷവും കിട്ടി.

ഇന്നും ധാരാളം ഹിരണ്യന്മാർ സ്വന്തംപേര് ഉച്ചരിക്കുവാൻ അവർ ആരോടും ആജ്ഞാപിക്കാറില്ലെങ്കിലും തിരക്കാറുണ്ട് എവിടെ ദൈവം? ക്ഷേത്രത്തിൽ ദൈവമുണ്ടോ? ശിലയിലുണ്ടോ? ശില്പങ്ങളിലുണ്ടോ? കാണാവുന്ന ഭൂമിമുഴുവൻ ബാഹ്യചക്ഷുസ്സുകളിൽ ഒതുങ്ങുന്നില്ല. പിന്നെയല്ലേ, അണ്ഡകടാഹം മുഴുവൻ വ്യാപിച്ചുകിടക്കുന്ന അപ്രമേയ ശക്തിയെ കാണാൻ കഴിയുന്നത്?

മൂഷികൻ മാർജാരനായി, ശുനകനായി, വ്യാഘ്രമായി, ഒടുവിൽ അതുല്യനായ വ്യാളിയായി. അപ്പോൾ ഒരു വ്യാമോഹം. തന്റെ പരിവർത്തനങ്ങൾക്ക് കാരണഭൂതനായ ആ മുനി ജീവിച്ചിരുന്നാൽ അപകടമാണ്. അയാൾക്ക് മറിച്ചു പ്രവർത്തിക്കാനാവും. അതുകൊണ്ട് അയാളുടെ മേൽ ചാടിവീഴുക തന്നെ. വ്യാളി അതുചെയ്തു. ഫലമോ? മൂഷികൻ വീണ്ടും പഴയപടി മൂഷികനായിത്തീർന്നു.

കിഴക്കും പടിഞ്ഞാറും ഒക്കെയായി വളർന്നുവരുന്ന ശാസ്ത്രം പർവ്വതങ്ങളിൽ തുടങ്ങി പരമാണുവിൽ വന്നുനില്ക്കുകയാണ്. ശാസ്ത്ര നേട്ടങ്ങൾ വനചരനായ മാനവനെ ഖഗോളചാരിയായ വാനവനാക്കിയിട്ടുണ്ട്. അതിനിടയിൽ പടിഞ്ഞാറ് എവിടെയോ രൂപംപൂണ്ട ഒരു പ്രത്യയശാസ്ത്രത്തിന്റെ ഗന്ധകദ്രവത്തിൽ മുക്കിയെടുത്തുപതം വരുത്തിയ ഒരു പുതിയ തത്വശാസ്ത്രത്തിന്റെ വാളുമായി ഒരുകൂട്ടർ വിശ്വാസികളുടെ നേരെ പാഞ്ഞടുക്കുകയാണ്-ആധുനിക ഹിരണ്യന്മാർ. അവർക്കും അറിയണം, ദൈവത്തിന്റെ ആസ്ഥാനം എവിടെയാണെന്ന്. കണ്ടുകിട്ടിയിട്ടുവേണം മുഖത്തുനോക്കി പറയാൻ; ''അല്ലയോ ദൈവമേ! നീ മനുഷ്യനെ മാത്രമേ സൃഷ്ടിച്ചുള്ളു. പക്ഷേ മനുഷ്യനാകട്ടെ, ഇക്കാണുന്നതൊക്കെയും സൃഷ്ടിച്ചു''എന്ന്! അപ്പോൾ ആരാണ് കേമൻ? നാദബ്രഹ്മത്തിൽനിന്നു പഞ്ചഭൂതങ്ങളെയും അവകൊണ്ട് ചരാചരങ്ങളെയും സൃഷ്ടിച്ച ഈശ്വരനേക്കാൾ വലിയ ശാസ്ത്രജ്ഞനും ശില്പിയും ഇല്ലതന്നെ. വീമ്പിളക്കുന്ന മനുഷ്യനാകട്ടെ പ്രപഞ്ചോപര്യതലത്തിലുള്ള മൂലകങ്ങൾക്ക

രൂപഭേദം കൊടുക്കുന്നു എന്നതിൽക്കവിഞ്ഞു പുത്തനായൊരുമണൽത്തരിയെപ്പോലും സൃഷ്ടിക്കുവാൻ കഴിവില്ലാത്തവനാണെന്ന സത്യം വളരെ കുറച്ചുപേർ മാത്രമേ അറിയുന്നുള്ളു. പ്രപഞ്ചത്തിന്റെ രഹസ്യത്തെക്കുറിച്ചുള്ള ഈ അജ്ഞതയാണ് മനുഷ്യനെ അന്ധനാക്കിയത്. എന്നാൽ അതിപ്രാചീനരായ ഭാരതീയാചാര്യന്മാരാകട്ടെ പ്രപഞ്ചത്തിന്റെ നിഗൂഢതയിലേക്ക് ആഴ്ന്നിറങ്ങിച്ചെന്ന് അവിടെ നിന്നും അനർഘസൂക്തങ്ങൾ വാരിയെടുത്ത് വിലവാങ്ങാതെ വീശി വിതറി. വേദങ്ങളും ശാസ്ത്രങ്ങളും അങ്ങിനെ മനുഷ്യന്റെ നാവേൽ പാഠമായി. സനാതനത്വം എന്ന ഒരു ശാശ്വത ചിന്ത ജീവിതത്തിന്റെ ഭാഗമായിത്തീർന്നു. അങ്ങിനെ പ്രത്യേക സ്ഥാപകന്മാരാരുമില്ലാതെ ഉരുത്തിരിഞ്ഞ ഒരു ജീവിത പദ്ധതിയാണ് ഹിന്ദുമതം. ആരാണ് ഹിന്ദുമത സ്ഥാപകൻ? എന്നാണ് ആ മതത്തിന്റെ ഉദയം? ചരിത്ര വിദ്യാർത്ഥികൾപോലും അങ്ങ് വിദൂരതയിലേക്ക് വിരൽ ചൂണ്ടി 'ദാ, അവിടെ, അവിടെ ആരോ ആണ്'' എന്നേ പറയൂ. അവിടെ മറഞ്ഞിരിക്കുന്നത് ആരാണെന്നു നമുക്കെല്ലാം അറിയാം — കാലപുരുഷൻ.

സൂക്ഷ്മവും കൂലംകഷവുമായ പരീക്ഷണനിരീക്ഷണങ്ങൾക്കുശേഷം രൂപം പ്രാപിക്കുന്നശാസ്ത്രതത്വങ്ങൾപോലും ചിലപ്പോൾ അബദ്ധജഡിലമാണെന്ന പുനർചിന്തനം ചെയ്യുമ്പോൾ കണ്ടെത്താൻ കഴിഞ്ഞിട്ടുണ്ട്. അനാചാരങ്ങളും അന്ധവിശ്വാസങ്ങളും ഒരു കാലത്ത് ഹിന്ദുധർമ്മത്തിന്റെ കാന്തിയും ശോഭയും കളഞ്ഞുകളിച്ചു എന്നു വേണമെങ്കിൽ വാദത്തിനുവേണ്ടി സമ്മതിക്കാം. ധർമ്മാധിഷ്ഠിതമായ അനശ്വരതയെ മന്ദബുദ്ധികളും സ്വാർത്ഥലോപികളുമായഒരുക്കൂട്ടർ കൈകാര്യം ചെയ്തപ്പോഴുണ്ടായ ഒരു താല്ക്കാലിക സ്ഖലിതം മാത്രമായിരുന്നു ഇത്. ധമ്മത്തിനു ഗ്ലാനിവന്നപ്പോഴെല്ലാം ഭഗവാൻ തന്നെ ഓരോ രൂപത്തിലും ഭാവത്തിലും പ്രത്യക്ഷപ്പെട്ടു തെററുതിരുത്തിയിട്ടുണ്ട്. പക്ഷേ സർവ്വജ്ഞനെന്നു ഭാവിക്കുന്ന മനുഷ്യനാകട്ടെ ഈശ്വരന് സ്വൈരം കൊടുക്കുന്ന മട്ടില്ല. അധമ്മത്തിൽ നിന്നും അധമ്മത്തിലേക്കു വഴുതിപ്പോകുന്ന മാനവരാശി ഇനിയും ഈശ്വരനെ അവതരിപ്പിച്ചേ അടങ്ങൂ. അന്ന് ഇരുമ്പു തൂണിൽ നിന്നായിരുന്നു എങ്കിൽ, ഇനിഒരുപക്ഷേ പരമാണു(Aton)വിൽ നിന്നായിരിക്കും സർവ്വസംഹാരമൂർത്തി സംജാതമാകാൻ പോകുന്നത്!

പരമാത്മാവ് എന്ന അപ്രമേയശക്തിയുമായി ബന്ധപ്പെട്ടാണ് ഹിന്ദുമതംനിലകൊള്ളുന്നത്. ശ്രീ ശങ്കര ഭഗവത്പാദർ പരമാത്മാവിനേയും ജീവാത്മാവിനേയും ബന്ധിച്ചുകൊണ്ട് ഹിന്ദുമതത്തിനു പുതിയ വ്യാഖ്യാനം നൽകി മതത്തിനു കൂടുതൽ ഉത്തേജനം നല്കി, ആ സേതു നിമാചനം അദ്വൈത സിദ്ധാന്തത്തിന്റെ മംഗളശംഖധ്വനി മുഴക്കി ഹിന്ദുമതത്തെ ഭാരതത്തിൽ പുനരധിവസിപ്പിച്ചു. രാമാനന്ദ സ്വാമികളും മാധ്വാചാര്യരും അദ്വൈത സിദ്ധാന്തത്തിനു പുതിയ കാഴ്ചപ്പാടുകൾ നൽകി. പക്ഷേ ജീവാത്മാവും പരമാത്മാവും പണ്ഡിതന്മാർക്കുമാത്രം മനസ്സിലാകുന്ന സങ്കേതങ്ങളായിരുന്നു. അതിനാൽ അവിടത്തെ ശിഷ്യന്മാർ അദ്വൈതസിദ്ധാന്തവും, വിശിഷ്ടാദ്വൈതവും സാധാരണ ജനങ്ങൾക്കു മധുരോദാരമായി പകർന്നുകൊ

ടുത്തു. പക്ഷേ ഇക്കൂട്ടത്തിൽ കള്ളനാണയങ്ങളും പ്രചരിക്കാതിരുന്നില്ല. അറുപത്തിനാലു അനാചാരങ്ങളുടെ കഥ അങ്ങനെയുള്ളതാണ്.

ജീവാത്മാവും പരമാത്മാവും തമ്മിലുള്ള ബന്ധം എന്തുതന്നെ ആയിരുന്നാലും ശരി, അവ ആപേക്ഷികങ്ങളും അനുപൂരകങ്ങളുമാണ്. പരമാത്മാവിൻെറ യഥാതഥമായ പ്രകൃതം എത്ര വ്യാഖ്യാനിച്ചാലും സാധാരണക്കാർക്ക് അതു് അജ്ഞാതം തന്നെ ആയിരിക്കും. കാരണങ്ങൾ രണ്ടാണ്: ഒന്നു അതു ഗഹനമാണു എന്നതു തന്നെ. രണ്ടാമത്തേതാകട്ടെ, പരമാത്മാവിൻെറപൊരുൾ അറിയുമ്പോഴത്തേക്കും അവൻ സാധാരണ മനുഷ്യൻെറ പദവിയിൽ നിന്നു വളരെ ഉയർന്നു്, ഋഗ്വേദത്തിൽ പറഞ്ഞിരിക്കുന്നതു പോലെ വേണ്ടുവോളം സൽഫലങ്ങളെ ഉൾക്കൊണ്ടു് തായ്‌വള്ളിയിൽ നിന്നു വിട്ടു. അലൗകികത നേടാൻ പര്യാപ്തവും ആയിത്തീരും എന്നതാണ്. ഇവിടെ ഒന്നേ പോംവഴിയുള്ളു. പരമാത്മാവിൻെറ സമുചിതമായ പ്രതീകങ്ങളെ ആവിഷ്കരിക്കുക എന്നതാണതു്. നമ്മുടെ ക്ഷേത്രങ്ങളിൽ ഇത്രമാത്രമേ ചെയ്തിട്ടുള്ളു. അവിടെ ശ്രീകോവിലിലെ പ്രതിഷ്ഠ എന്തായിരുന്നാലും അതു പരമാത്മാവിൻെറ ഒരു സിമ്പൽ മാത്രം. തെളിനീർ നിറഞ്ഞ താമരക്കുളവും തണലേകുന്ന ആൽമരത്തറയും ഹവിർ ഗന്ധത്താലും മന്ത്രോച്ചാരണങ്ങളാലും പരിപൂതമാക്കപ്പെട്ടചുററമ്പലങ്ങളുംനഗരത്തിലെ മലിമസമായ അന്തരീക്ഷത്തിൽ നിന്നും എത്രയോ വ്യത്യസ്തമാണ്. ഈശ്വരസന്നിധിയിൽ നാം ശാന്തിയും സമാധാനവുമാണ് കാംക്ഷിക്കുന്നതെങ്കിൽ അതു് ആ ക്ഷേത്ര സങ്കേതങ്ങളിലുണ്ട്. 'ഇടയ്ക്കയൊലിയൊത്തു് തിരുനാമോൽഘോഷങ്ങൾക്കിടയ്ക്കു കേൾക്കാകുന്ന രമ്യഷ്ടപദീഗാനം' ഇന്നു നാടാകെ നടമാടുന്ന ചെകിടടക്കുന്ന പോപ്- മ്യൂസിക് എന്ന സംഗീതാഭാസത്തേക്കാൾ എത്രയോ കർണ്ണാനന്ദകരമാണ്. പൂക്കളെ പിച്ചിച്ചീന്തിയും ചിത്രശലഭങ്ങളെ വെട്ടിമുറിച്ചും ജീവരഹസ്യം കണ്ടെത്താൻ ശ്രമിക്കുന്നവരും 'തങ്കഭസ്മക്കുറിയിട്ട തമ്പുരാട്ടിയുടെ തിങ്കളാഴ്ച നൊയമ്പുമുടക്കാൻ നടക്കുന്ന തീർത്ഥകാകന്മാരും അമ്പലനടയിലും അരയാൽത്തറയിലും ഇഷ്ടകാമുകിയെ തേടിനടക്കുന്ന അസ്ഥിരപ്രജ്ഞരും പവിത്രമായ ക്ഷേത്ര സങ്കേതങ്ങളിലെ ഭൗതിക വസ്തുക്കൾതന്നെ കണ്ടെന്നുവരികയില്ല. ഈശ്വരൻ സർവ്വവ്യാപിയാണെങ്കിൽ, ഏതു വസ്തുവിൽ ഈശ്വരസാന്നിദ്ധ്യമുണ്ടെന്നു നാം നിരന്തരം വിശ്വസിക്കുകയും അതിനെ കണ്ടെത്താൻ ആത്മാർത്ഥമായി പ്രാർത്ഥിക്കുകയും ചെയ്താൽ, അവിടെ നമുക്കു ആശ്വാസം കണ്ടെത്താം. എല്ലാ ലോകർക്കും സുഖവും സമാധാനവുമുണ്ടാകാൻ ആഗ്രഹിക്കുന്ന ഒരു വലിയ മനസ്സാണ് നമുക്കുണ്ടാകേണ്ടതു്.

ആ മയമണച്ചു സുമബാണനു പുരാ നീ
വ്യോമകച എങ്കിലുമിതെന്തൊരു
വിചിത്രം!

പ്രേമമൊടു വാമനനു മാമല മകൾക്കായ്
സോമ രവിലോചന ഭവാനിഹകൊടുത്തു.
ഗംഗയെ ശിരസ്സിലഥ താങ്ങി മരുവിടും
മംഗലമനോഹര ത്രിപുണ്ഡ്രധര ശംഭോ
തുംഗസുഖമെന്നു യിവനുണ്മയിൽ വരാൻ
നിസ്സംഗപദപങ്കജമതിന്നു പണിയുന്നേൻ-